## कुलपतीनां वचः

**प्रो. मल्लेपुरं जि. वेङ्कटेशः**



**अयि भोः महाजनाः,**

इदानीमेव २०११-१२तमवर्षस्य कार्यक्रमाः सुसम्पन्नाः । सङ्क्रमणं, युगादिपर्व च अस्माभिः आचरितम् । २०१२-१३तमवर्षस्य कार्यक्रमाः अधुना आरब्धाः सन्ति । गते वर्षे अस्माभिः अधिकाधिकाः कार्यक्रमाः सञ्चालिताः । अस्मात् कारणात्, जनाः संस्कृतज्ञानं प्राप्तुम् उत्सुकाः दृश्यन्ते ।

संस्कृतलेखकानां सृष्टिः अपि कर्णाटकसंस्कृतविश्वविद्यालयस्य उद्देशेषु अन्यतमा। एतया दृष्ट्या बह्वीः योजनाः स्वीकृताः । संस्कृतग्रन्थ-पुरस्कारप्रदानसमारम्भोऽपि सुसम्पन्नः । संस्कृतपरिसरनिर्माणमपि अस्माकम् उद्देशेषु अन्यतमम् । एतदर्थं साह्यम् आचरितवद्भ्यः कर्णाटकसर्वकारस्य उन्नतशिक्षणविभागीयेभ्यः, संस्कृतज्ञेभ्यः, सार्वजनिकेभ्यः, छात्रेभ्यश्च कृतज्ञताः आविष्करोमि ।

कर्णाटकसंस्कृतविश्वविद्यालयस्य प्रसाराङ्गस्य उपनिर्देशकत्वेन डा. एम्. के. श्रीधरमहोदयः नियुक्तः । अस्माकं शैक्षणिककार्याणि सर्वानपि प्राप्नुवन्तु इति धिया त्रैमासिकपत्रिकायाः एषा सञ्चिका भवतां हस्ते निधीयमाना अस्ति ।

भवद्भ्यः सर्वेभ्यः नूतनस्य नन्दनसंवत्सरस्य हार्दिकाः शुभाशयाः ।

## सम्पादकीयम्

**डा ॥ एम्.के. श्रीधर्**



**आत्मीयबन्धो,**

कर्णाटकसंस्कृतविश्वविद्यालयेन प्रकाश्यमानं षष्ठं वार्तापत्रं युष्माकं हस्तयोः इदानीम् अस्ति। वार्तापत्रस्य भूतपूर्वसम्पादिकायाः डा. नागरत्ना हेगडेवर्यायाः कृते कृतज्ञतापूर्वकं धन्यवादान् सम्पादक-मण्डलीपरतया समर्पयामः ।

गतेषु त्रिषु मासेषु बहवः कार्यक्रमाः सञ्जाताः । तेषु शिवमोग्गनगरे प्रवृत्ता कालिदास-पम्पसम्बद्धा विचारगोष्ठी, राष्ट्रियसंस्कृतसंस्थानस्य कुलपतिभिः नाट्यशास्त्रगौरवम् अधिकृत्य विहितः संस्थापनोपन्यासः, महामहिमशालिभिः राज्यपालैः प्रदत्तः संस्कृतग्रन्थपुरस्कारः, संस्कृतशिक्षणनिर्देशनालयद्वारा प्रचालिताः पाठशालापरीक्षाः इत्यादयः प्रमुखाः । कुलपतीनां मार्गदर्शने एते कार्यक्रमाः प्रवृत्ताः इति महान् प्रमोदावहः विषयः । अग्रिमेषु दिनेषु इतोऽप्यधिकाः कार्यक्रमाः आयोजयिष्यन्ते । सहृदयानां भवतां सर्वेषां सहयोगं निरन्तरं कामयामहे ।

# ಡಾ. ವಿ.ಎಸ್. ಆಚಾರ್ಯ

# ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ



**(1929–2012)**

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ, ಯೋಜನೆ, ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಾದ ಸನ್ಮಾನ್ಯ ಡಾ. ವಿ.ಎಸ್. ಆಚಾರ್ಯ ಅವರು ದಿನಾಂಕ 14.02.2012 ರಂದು ಹಠಾತ್ತಾಗಿ ನಿಧನ ಹೊಂದಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಭಿವೃದ್ಧಿ ಮತ್ತು ಪ್ರಗತಿಗಳ ಬಗೆಗೆ ಅವರು ಬಹು ಆಸಕ್ತಿ ಹೊಂದಿದ್ದರು. ಅವರು ಸಚಿವರಾಗಿದ್ದ ಅವಧಿಯಲ್ಲಿ, ಸಂಸ್ಕೃತ ಕ್ಷೇತ್ರ ಬಹಳಷ್ಟು ಬೆಳವಣಿಗೆಗಳನ್ನು ಕಂಡಿತು. ಮಾನ್ಯ ಸಚಿವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ' ಹಾಗೂ 'ಈ–ಗ್ರಂಥಾಲಯ'ಗಳ ಉದ್ಘಾಟನೆ ಮಾಡಿದ್ದರು. ವೇದವಿಜ್ಞಾನ ಶೋಧಸಂಸ್ಥಾನ ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ನಡೆದ 'ಬ್ರಹ್ಮರ್ಷಿ ದೈವರಾತ ಸಂಭ್ರಮ' ಎಂಬ ರಾಷ್ಟ್ರೀಯ ವಿಚಾರ ಸಂಕಿರಣದ ಉದ್ಘಾಟನೆಯನ್ನು ಮಾಡಿ ಉದ್ಬೋಧಕವಾದ ಭಾಷಣವನ್ನು ಮಾಡಿದ್ದರು.

ಅವರ ಅಕಾಲಿಕ ನಿಧನದಿಂದ ಕರ್ನಾಟಕ ಸಂಸ್ಕೃತ ಕ್ಷೇತ್ರವು ಬಡವಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿಕಾರಿವರ್ಗ, ಪ್ರಶಾಸನ ಸಮಿತಿ ಹಾಗೂ ಹಣಕಾಸು ಸಮಿತಿಯ ಸದಸ್ಯರು, ವಿವಿಧ ಸಮಿತಿಗಳಲ್ಲಿರುವ ಗೌರವಾನ್ವಿತ ಸದಸ್ಯರು, ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬಂದಿರುವ ಎಲ್ಲ ಸಂಸ್ಕೃತ ಕಾಲೇಜುಗಳ, ಪಾಠಶಾಲೆಗಳ ಅಧ್ಯಾಪಕ–ವಿದ್ಯಾರ್ಥಿವೃಂದ ಹಾಗೂ ಸಂಸ್ಕೃತ ಹಿತೈಷಿಗಳು ಡಾ. ವಿ.ಎಸ್. ಆಚಾರ್ಯ ಅವರ ನಿಧನಕ್ಕೆ ಭಾವಪೂರ್ಣವಾದ ದುಃಖತಪ್ತ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತದೆ.

ಕುಲಪತಿ



# स्वान्तस्पन्दसन्देशः

विश्वस्मिन् जगति विद्यायाः नैके आलयाः विलसन्ति । भारतेऽपि प्रतिनगरं प्रतिवीथि संस्थाः संस्थानानि विलसन्ति, क्रमेण तानि कालकवलितानि च भवन्ति ।

काले गते बहुतिथे सरस्वत्याः आलयं कमलालया कवलीकरोतीति प्रह्लादस्य आह्लादकेन्द्रं हिरण्मयेन अक्ष्णा हिरण्येन कशिपुना च आच्छाद्यते इति अहो विधिविलसितम् ।

किन्तु कार्नाटकीयोऽयं संस्कृतविश्वविद्यालयः अस्य राज्यस्य कावेरीगोदावरीसीमान्तःपाति-असीमविद्भूषितानां विदुषां सुपुष्पितकल्पवल्लीसौगन्ध्यावन्ध्यज्ञानविज्ञानसम्भ्रमोद्भवत्वात् वेद-शास्त्रपरम्परापरिपालनप्रहरणकार्यं विधत्त इति आशासते संस्कृतशिष्टाः ।

तथापि वार्तमानिकः कालः प्रतिपदं परीक्षाकाल इव प्रतीयते । अयं विश्वविद्यालयः सारस्वतालयकमलालयवैयधिकरण्यव्यपरितापपरीक्षामुत्तीर्य उद्बाहु वामनमनोमितिमतीत्य त्रिविक्रम- पराक्रममावाह्य स्वाभिष्टसिद्धिमार्गे पर्याप्तपाथेयवान् अग्रे गच्छतु इति आशास्महे।

एतल्लक्ष्यपूरकतया प्राचीनज्ञानविज्ञानपक्षीयाः वेद-संस्कृताध्यापकाः, शोधकाः, मार्गदर्शकाश्च मतमितिं शास्त्राभिनिवेशं कमलालीनतां, पुरस्कारतिरस्कारद्वैधीभावं दूरतोऽपवार्य युवविद्वन्निर्माणपरायणाः स्वार्षपरम्परानिष्ठां प्रमाणीकुर्युः । अहङ्कार-ममकारादिक्लेशक्लिष्टेषु विश्वविद्यालयेषु अनेकेषु सत्सु कार्नाटकीयोऽयं विश्वविद्यालयः प्रसारयन् आर्षज्ञानविज्ञानं पाठयन् नित्यं वेदशास्त्राणि प्रचारयन् प्राचीनस्य अर्वाचीनौचित्यं संस्कारयन् भारतीयपक्षतः शिक्षालोकं कार्नाटकीयगैर्वाणवाणीवैभवं पुनः प्रतिष्ठापयन् अग्रे सरत्विति ।

गुरुकुलाधिष्ठातृदेवतां दक्षिणामूर्तिं साष्टाङ्गपातं प्रणम्य प्रार्थयामि ।

**प्रो. रामचन्द्र जि. भट्टः**

निदेशकः, वेदविज्ञानशोधसंस्थानम्, डीन्, विवेकानन्द योगविश्वविद्यालयः,
जनसेवा ट्रस्ट् (रि), मागडिमार्गः, चन्नेनहल्लीग्रामः, बेङ्गलूरु - ५६२१३०

# ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು

## – ಕಿರುಪರಿಚಯ

**ವಿದ್ವಾನ್ ರಾಮವಿಠ್ಠಲಾಚಾರ್ಯ**
ನ್ಯಾಯಶಾಸ್ತ್ರ ವಿಭಾಗ
ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು



ಅಧ್ಯಾತ್ಮ ಸಂಪತ್ತಿನ ತವರುಭೂಮಿಯೆನಿಸಿದ ಭಾರತ ಭೂಮಿ ಇಡೀ ಜಗತ್ತಿಗೆ ಅಪೂರ್ವವಾದ ತತ್ತ್ವಜ್ಞಾನವನ್ನು ದಯಪಾಲಿಸಿದೆ. ಆರ್ಥಿಕವಾಗಿ ಮುಂದುವರಿದ ರಾಷ್ಟ್ರಗಳೂ ಕೂಡ ಧರ್ಮದ ಅಂಕೆಯಿಲ್ಲದ ಸ್ವಚ್ಛಂದಭೋಗ ಜೀವನದ ಪ್ರಭಾವದಿಂದ ಮನಃಶಾಂತಿಯನ್ನು ಅರಿಸಿಕೊಂಡು ಭಾರತದ ಕಡೆಗೆ ಮುಖಮಾಡಿವೆ. ಪ್ರಾಚೀನ ಋಷಿಮುನಿಗಳು ಭೋಗವೈಭವದ ನಶ್ವರತೆಯನ್ನು ಮನಗಂಡು ಅದರ ಪರಿತ್ಯಾಗ ಮಾಡಿ ತಪಸ್ಸು ಮಾಡಿ ಅಂತರಂಗದಲ್ಲಿ ಸ್ಫುರಣಗೊಂಡ ಜ್ಞಾನದ ಬೆಳಕನ್ನು ವೇದಶಾಸ್ತ್ರಪುರಾಣಗಳ ಮೂಲಕ ಹೊರಹೊಮ್ಮಿಸಿ ಆಧ್ಯಾತ್ಮಿಕ ಪ್ರಪಂಚದ ಸೊಬಗು ಸೋಜಿಗಗಳನ್ನು ತೆರೆದಿಟ್ಟಿದ್ದಾರೆ. ಮುಂದಿನ ಪರಂಪರೆಯಲ್ಲಿ ಮಠಮಾನ್ಯಗಳು ಆ ಶಾಸ್ತ್ರಸಂಪತ್ತನ್ನು ರಕ್ಷಣೆ ಮಾಡುವುದರಲ್ಲಿ ಯಥಾಯೋಗ್ಯ ಪರಿಶ್ರಮಪಟ್ಟು ನಮ್ಮ ತಲೆಮಾರಿನ ತನಕ ತಲುಪಿಸಿವೆ. ಆದರೂ ಕಳೆದುಕೊಂಡದ್ದು ಬಹಳ. ಉಳಿಸಿ ಕೊಂಡದ್ದು ವಿರಳ. ಉಳಿದಿದ್ದಷ್ಟನ್ನಾದರೂ ಉಳಿಸಿಕೊಳ್ಳುವ ಹೊಣೆಗಾರಿಕೆ ನಮ್ಮ ಮೇಲಿದೆ.

ಪಾಶ್ಚಿಮಾತ್ಯ ವೇಷ, ಆಹಾರ, ವಿದ್ಯೆ, ಸಂಸ್ಕೃತಿಗಳ ದಾಳಿಯಿಂದ ನಮ್ಮ ತತ್ತ್ವಜ್ಞಾನ ಸಂಸ್ಕೃತಿಗಳು ಕ್ರಮಕ್ರಮವಾಗಿ ನಶಿಸುತ್ತಿರುವುದನ್ನು ಗಮನಿಸಿ ಪೂಜ್ಯ ಪೇಜಾವರ ಮಠಾಧೀಶರು 1956ರಲ್ಲಿ ಶಾಸ್ತ್ರಪಾಠಪ್ರವಚನಗಳನ್ನು ಮಾಡಬಲ್ಲ ವಿದ್ವಾಂಸರನ್ನು ತರಬೇತುಗೊಳಿಸುವ ದೃಷ್ಟಿಯಿಂದ ಪೂರ್ಣಪ್ರಜ್ಞ ವಿದ್ಯಾಪೀಠವನ್ನು ಸ್ಥಾಪನೆಮಾಡಿದರು.

ಆರಂಭದಲ್ಲಿ ಇಬ್ಬರು ಅಧ್ಯಾಪಕರು 12ವಿದ್ಯಾರ್ಥಿಗಳನ್ನು ಒಳಗೊಂಡು ಹುಟ್ಟಿದ ಸಂಸ್ಥೆ ಇಂದು 5 ಎಕರೆಯ ವಿಸ್ತೀರ್ಣದ ಸ್ಥಳದಲ್ಲಿ ಸುಮಾರು 400 ವಿದ್ಯಾರ್ಥಿಗಳು 40 ಅಧ್ಯಾಪಕರನ್ನು ತುಂಬಿಕೊಂಡು ಐವತ್ತು ವರ್ಷಗಳನ್ನು ಮೀರಿನಿಂತು ಬೆಳೆದ ಹೆಮ್ಮರವಾಗಿದೆ. ಸಾಮಾಜಿಕರು ಕೊಟ್ಟ ಮುಷ್ಟಿ ಅಕ್ಕಿದಾನದಿಂದ, ಚಿಕ್ಕ ಕಾಸುರೂಪಾಯಿಗಳಿಂದ ಅಲ್ಲದೆ ತಮಗೆ ಭಕ್ತರು ಅರ್ಪಿಸಿದ ಕಾಣಿಕೆಗಳಿಂದಲೇ ಶ್ರೀಪಾದರು ಈ ಸಂಸ್ಥೆಯನ್ನು ಬೆಳೆಸಿದರು. ಪೇಜಾವರ ಶ್ರೀಪಾದರಿಗೆ ಹಾರ್ದಿಕವಾಗಿ ಅವರ ವಿದ್ಯಾಗುರುಗಳು ಶ್ರೀಶ್ರೀವಿದ್ಯಾಮಾನ್ಯತೀರ್ಥರು ಹಾರೈಸುವುದಲ್ಲದೆ ಹೆಗಲಿಗೆ ಹೆಗಲು ಕೊಟ್ಟು ಮಕ್ಕಳಿಗೆ ಪಾಠ ಹೇಳಿ ತಮ್ಮದೇ ಸಂಸ್ಥೆಯೆಂಬ ಅಭಿಮಾನದಿಂದ ಬೆಂಬಲಿಸಿದರು. ಶಾಸ್ತ್ರಾಭ್ಯಾಸ ಹಾಗು ಪ್ರಯೋಗದ ಶಿಕ್ಷಣ ಎರಡನ್ನೂ ಮಕ್ಕಳಿಗೆ ಒದಗಿಸುವ ಸಂಕಲ್ಪವನ್ನು ಶ್ರೀಪಾದರು ಕೈಗೊಂಡಿದ್ದರು.

ಕೇಂದ್ರ ಸರ್ಕಾರವು ಸಂಸ್ಥೆಯನ್ನು ಸಂದರ್ಶಿಸಿ ಪ್ರಾಚೀನ ಆದರ್ಶ ಗುರುಕುಲವಾಗಿದೆಯೆಂದು ಪ್ರಶಂಸಿಸಿ ಗುರುಕುಲ ಯೋಜನೆಯ ಮೂಲಕ ಅನುದಾನವನ್ನು ನೀಡಿತು. 1976ನೇ ಇಸವಿಯಲ್ಲಿ ಕರ್ನಾಟಕಸರ್ಕಾರವು ಅನುದಾನನೀಡಿ ಸಂಸ್ಕೃತಮಹಾಪಾಠಶಾಲೆಯೆಂದು ಮಾನ್ಯತೆಯನ್ನು ನೀಡಿತು. ಅಂದಿನಿಂದ ಪ್ರಥಮಾ, ಕಾವ್ಯ, ಸಾಹಿತ್ಯ, ವಿದ್ವತ್ ವಿಭಾಗಗಳು ಸ್ಥಾಪನೆಗೊಂಡು ನೂತನ ಶಿಕ್ಷಣದ ವ್ಯವಸ್ಥೆಯಾಯಿತು. ದ್ವೈತವೇದಾಂತ, ನವೀನ ನ್ಯಾಯ, ಅಲಂಕಾರಶಾಸ್ತ್ರಗಳ ವಿಭಾಗಗಳಲ್ಲಿ ವಿದ್ಯಾರ್ಥಿಗಳು ವಿದ್ವತ್‌ಪದವಿಯನ್ನು ಪಡೆಯುವಂತಾಯಿತು. ಅಂದಿನಿಂದ ರಾಷ್ಟ್ರಮಟ್ಟದ ಸಂಸ್ಕೃತಸ್ಪರ್ಧೆಗಳಲ್ಲಿ ಸಂಸ್ಥೆಯ ವಿದ್ಯಾರ್ಥಿಗಳು ಭಾಗವಹಿಸಿ ಸ್ವರ್ಣಪದಕಗಳನ್ನು ಗಳಿಸುತ್ತಾ ಬಂದಿದ್ದಾರೆ.

1990ರಲ್ಲಿ ಪೂರ್ಣಪ್ರಜ್ಞ ಸಂಶೋಧನಾ ಮಂದಿರವು ಇಲ್ಲಿ ಸ್ಥಾಪನೆಯಾಯಿತು. 1994ರಲ್ಲಿ ಕೇಂದ್ರಸರ್ಕಾರದಿಂದ 'ಆದರ್ಶಶೋಧಸಂಸ್ಥಾ'ಎಂದು ಮಾನ್ಯತೆಯನ್ನು ಪಡೆದು ಅನುದಾನವನ್ನು ಹೊಂದಿದೆ. ಈ ಎರಡು ಸಂಸ್ಥೆಗಳು ಈಗಾಗಲೇ ಸುಮಾರು ನೂರು ಪುಸ್ತಕಗಳನ್ನು ಪ್ರಕಾಶನಪಡಿಸಿವೆ. ಪೂರ್ಣಪ್ರಜ್ಞ ವಿದ್ಯಾಪೀಠದ

ಗ್ರಂಥಾಲಯವೂ ಅನೇಕ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹದೊಂದಿಗೆ ಮುದ್ರಿತಪುಸ್ತಕಗಳೂ ಸೇರಿ ಹತ್ತು ಸಾವಿರಕ್ಕು ಹೆಚ್ಚು ಗ್ರಂಥಗಳನ್ನು ಹೊಂದಿದೆ.

ಸಂಸ್ಥೆಯಲ್ಲಿ 13ವರ್ಷಗಳ ವಿದ್ಯಾಭ್ಯಾಸದ ವ್ಯವಸ್ಥೆಯಿದೆ. ಶಾಸ್ತ್ರಾಭ್ಯಾಸದ ಜೊತೆಗೆ ಲೌಕಿಕವಿದ್ಯಾಭ್ಯಾಸದ ವ್ಯವಸ್ಥೆಯೂ ಇಲ್ಲಿರುವುದು ವಿಶೇಷವಾಗಿದೆ. ಶಿಕ್ಷಣವು ವ್ಯಾಪಾರದ ಸರಕು ಆಗಿರುವ ಇಂದಿನ ಕಾಲದಲ್ಲಿಯೂ ವಿದ್ಯಾರ್ಥಿಗಳಿಂದ ಯಾವ ಹಣವನ್ನೂ ಪಡೆಯದೆ ಅವರಿಗೇ ಅಂಕಾನುಸಾರವಾಗಿ ವಿದ್ಯಾರ್ಥಿವೇತನವಿತ್ತು ಉಚಿತ ಊಟವಸತಿಗಳನ್ನಿತ್ತು ಪೋಷಣೆ ಮಾಡಿ ವಿದ್ಯಾಭ್ಯಾಸಮುಗಿದ ಬಳಿಕ ಉದ್ಯೋಗವನ್ನು ಕೊಡಿಸುವ ಜವಾಬ್ದಾರಿಯನ್ನು ಸಂಸ್ಥೆ ಹೊತ್ತಿದೆ.

**ಶಿಕ್ಷಣ ವ್ಯವಸ್ಥೆ:** ಮುಂಜಾನೆ 5ರಿಂದ ರಾತ್ರಿ10 ಘಂಟೆಯ ವರೆಗೆ ವಿದ್ಯಾರ್ಥಿಗಳು ನಿರಂತರ ಅಧ್ಯಾಪಕರ ಸಂಪರ್ಕದಲ್ಲಿರುತ್ತಾರೆ. ಉನ್ನತ ತರಗತಿಗಳಲ್ಲಿ ಐದೈದು ವಿದ್ಯಾರ್ಥಿಗಳನ್ನು ವಿಂಗಡಿಸಿ ಒಬ್ಬ ಅಧ್ಯಾಪಕರನ್ನು ನಿಯಮಿಸಿ ಅಧ್ಯಾಪಕರು ಮೊದಲ ದಿನ ಹೇಳಿದ ಪಾಠಗಳನ್ನು ಮರುದಿನ ವಿದ್ಯಾರ್ಥಿಗಳಿಂದ ಹೇಳಿಸಿ ಮುಂದಿನ ಪಾಠವನ್ನು ಮಾಡುವ ಗುರುಕುಲಪದ್ಧತಿಯ ಶಿಕ್ಷಣವನ್ನು ವಿದ್ಯಾಪೀಠದಲ್ಲಿ ನೀಡಲಾಗುತ್ತದೆ. ಸರಕಾರವು ನಡೆಸುವ ಪರೀಕ್ಷೆಗಳಲ್ಲದೆ ಸಂಸ್ಥೆಯೂ ಪ್ರತ್ಯೇಕವಾದ ಪರೀಕ್ಷೆಗಳನ್ನು ನಡೆಸುತ್ತದೆ. ಪ್ರತಿಯೊಂದು ಪಠ್ಯವಿಭಾಗದಲ್ಲೂ ಲೇಖನ ಮತ್ತು ವಾಕ್ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಸಂಸ್ಥೆಯ ಸಂಸ್ಥಾಪಕರಾದ ಶ್ರೀಗಳವರು ವರ್ಷದ ಕೊನೆಯಲ್ಲಿ ನಿಗದಿತ ವಿಷಯದ ವಾಕ್ ಪರೀಕ್ಷೆಯ ಮೂಲಕ ಪ್ರತಿ ವಿದ್ಯಾರ್ಥಿಯ ಯೋಗ್ಯತೆಯನ್ನು ನಿರ್ಧರಿಸುತ್ತಾರೆ.

**ಕಂಪ್ಯೂಟರ್ ಚಟುವಟಿಕೆ:** ಮೇಲ್ತರಗತಿಯ ಆಸಕ್ತ ವಿದ್ಯಾರ್ಥಿಗಳಿಗೆ ಆರಂಭಿಕ–ಅಗತ್ಯ ಕಂಪ್ಯೂಟರ್ ಕಲಿಕೆಯ ವ್ಯವಸ್ಥೆ ಇಲ್ಲಿದೆ. ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಯು ಪ್ರಾಯೋಜಿಸುವ, ದೇಶದ ಏಳು ಸಂಸ್ಕೃತ ಸಂಸ್ಥೆಗಳು ಸೇರಿ ನಡೆಸುತ್ತಿರುವ, 2008ರಿಂದ ನಡೆಯುತ್ತಿರುವ, ಸಂಸ್ಕೃತ–ಕಂಪ್ಯೂಟರ್ ಯಾಂತ್ರಿಕ ಅನುವಾದ ಯೋಜನೆಯಲ್ಲಿ ಈ ಸಂಸ್ಥೆಯು ಒಂದು. ಇತಿಹಾಸದಲ್ಲಿ ಇಲ್ಲಿಯವರೆಗೆ ಆಗದ ಕೆಲಸ ಈ ಯೋಜನೆಯಲ್ಲಿ ಆಗಿದೆ ಎಂದರೆ ಅತಿಶಯೋಕ್ತಿಯಲ್ಲ. (ವಿವರಗಳಿಗೆ http://sanskrit.uohyd.ernet.in/scl ಈ ಅಂತರ್ಜಾಲ ಪುಟವನ್ನು ನೋಡಬಹುದು.) ಇಲ್ಲಿ ಪ್ರಾಚೀನ ವಾಙ್ಮಯದ ಸಾವಿರಾರು ಗ್ರಂಥಗಳಿರುವ e–ಗ್ರಂಥಾಲಯವನ್ನು ಹತ್ತಾರು ವರ್ಷಗಳಿಂದ ಅಭಿವೃದ್ಧಿಪಡಿಸಲಾಗಿದೆ. ಕೃಷಿ–ಯೋಜನೆ–ಇತಿಹಾಸ–ಶಿಕ್ಷಣ–ಯೋಗ–ಆಯುರ್ವೇದ ಹೀಗೆ ಬೇರೆ ಬೇರೆ ಕ್ಷೇತ್ರದವರು ತಮ್ಮ ತಮ್ಮ ವಿಷಯಗಳ ಬಗ್ಗೆ ಸಂಸ್ಕೃತಗ್ರಂಥಗಳಲ್ಲಿ ಏನು ಹೇಳಿದ್ದಾರೆ ಎಂಬುದನ್ನು ಇಲ್ಲಿ ತಿಳಿಯಬಹುದಾಗಿದೆ.

**ವಿದ್ಯಾರ್ಥಿಗಳ ಚಟುವಟಿಕೆ:** ವಿದ್ಯಾಪೀಠದ ವಿದ್ಯಾರ್ಥಿ ಸಂಘವು ಸಕ್ರಿಯವಾಗಿದ್ದು ಹದಿನೈದು ದಿನಗಳಿಗೊಮ್ಮೆ ಪ್ರಾದೋಷಿಕ ಸಭೆಯನ್ನು ನಡೆಸುತ್ತದೆ. ತರಗತಿಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ಮೂರು ಗುಂಪುಗಳಲ್ಲಿ ವಿಂಗಡಿಸಿ ಒಬ್ಬ ಅಧ್ಯಾಪಕರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳು ಪೂರ್ವಸೂಚಿತ ವಿಷಯಗಳಲ್ಲಿ ಭಾಷಣ ಮಾಡುತ್ತಾರೆ. ಸಭೆಯಲ್ಲಿ ಪ್ರತಿಭಾಪ್ರದರ್ಶನಕ್ಕೂ ಅವಕಾಶವಿದೆ. ಪ್ರತಿಪತ್ ದಿನಗಳಂದು ಪರಿಣತರಿಂದ ಶಾಸ್ತ್ರ–ಸಂಸ್ಕೃತ–ಸಂಸ್ಕೃತಿ–ವಿಜ್ಞಾನ–ಆರೋಗ್ಯ ಇವುಗಳಿಗೆ ಸಂಬಂಧಿಸಿದಂತೆ ಭಾಷಣಗಳನ್ನು ನಡೆಸಲಾಗುತ್ತದೆ. ವರ್ಷಕ್ಕೊಮ್ಮೆ ಶಾಲಾ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ನಡೆಸುವ ಪ್ರಜ್ಞೋದ್ದೀಪನ ಕಾರ್ಯಕ್ರಮವನ್ನು ಸಂಘವು ನಡೆಸುತ್ತಿದೆ. ಪ್ರತಿವರ್ಷ 'ವಿದ್ಯೋತ' ಎಂಬ ಹೆಸರಿನ ವಿದ್ಯಾರ್ಥಿಗಳ ಲೇಖನ ಸಂಗ್ರಹದ ಹೊತ್ತಿಗೆಯನ್ನು ಪ್ರಕಟಿಸಲಾಗುತ್ತಿದೆ.

**ಸಿದ್ಧಿ ಸಾಧನೆಗಳು:** ಈಗಾಗಲೇ ಸಂಸ್ಥೆಯಲ್ಲಿ ಶಿಕ್ಷಣವನ್ನು ಪೂರ್ಣಗೊಳಿಸಿದ ಸುಮಾರು 520 ವಿದ್ವಾಂಸರು ಶೈಕ್ಷಣಿಕ ಕ್ಷೇತ್ರದ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ವಿದ್ವಾನ್ ಡಿ. ಪ್ರಹ್ಲಾದಾಚಾರ್ಯರು, ವಿದ್ವಾನ್ ಕೆ. ಹಯವದನ ಪುರಾಣಿಕರು ಸಂಸ್ಥೆಯ ವಿದ್ಯಾರ್ಥಿಗಳಾಗಿದ್ದು ರಾಷ್ಟ್ರಪತಿ ಪುರಸ್ಕಾರವನ್ನು ಗಳಿಸಿರುತ್ತಾರೆ. ಇದಲ್ಲದೆ ಹಲವರು, ವಿವಿಧ ಸಂಶೋಧನ ಮಂದಿರಗಳಲ್ಲಿ, ಬೇರೆ ಬೇರೆ ರಾಜ್ಯದ ಸಂಸ್ಕೃತ ವಿದ್ಯಾನಿಲಯಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ, ಸಂಸ್ಕೃತ ಕಾಲೇಜುಗಳಲ್ಲಿ, ಸಂಸ್ಕೃತ ಪಾಠಶಾಲೆಗಳಲ್ಲಿ, ನ್ಯಾಯಾಲಯದಲ್ಲಿಯೂ ವಿವಿಧ ಹುದ್ದೆಗಳನ್ನು ಅಲಂಕರಿಸಿ ಸೇವೆ ಸಲ್ಲಿಸುತ್ತಿದ್ದಾರೆ. ಬಾಳಗಾರ ಶ್ರೀಅಕ್ಷೋಭ್ಯತೀರ್ಥ ಸಂಸ್ಥಾನ, ಕುಕ್ಕೆ ಸುಬ್ರಹ್ಮಣ್ಯದ ಶ್ರೀ ವಿಷ್ಣುತೀರ್ಥ ಸಂಸ್ಥಾನ, ಭಂಡಾರಕೇರಿ, ಶ್ರೀ ಸತ್ಯತೀರ್ಥಸಂಸ್ಥಾನ ಮುಂತಾದೆಡೆಯಲ್ಲಿ ಇಲ್ಲಿ ಓದಿರುವ ವಿದ್ಯಾರ್ಥಿಗಳು ಜನಪ್ರಿಯ ಮಠಾಧಿಪತಿಗಳೂ ಆಗಿರುತ್ತಾರೆ. ಕೆಲವು ವಿದ್ಯಾರ್ಥಿಗಳು ಸನ್ಯಾಸಿಗಳೂ ಆಗಿ ಅಧ್ಯಾತ್ಮ ಸಾಧನೆಯಲ್ಲಿ ತೊಡಗಿದ್ದಾರೆ.

ಇಂದಿನ ಸರಕಾರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ವನ್ನು ಸ್ಥಾಪನೆ ಮಾಡಿ ಮಹೋಪಕಾರಮಾಡಿದೆ. ಪೂರ್ಣಪ್ರಜ್ಞ ವಿದ್ಯಾಪೀಠವು ವಿಶ್ವವಿದ್ಯಾನಿಲಯದ ಅಂಗೀಕಾರ ನೆಲೆಯಲ್ಲಿ ಸಂಸ್ಕೃತ ಪಾಠಶಾಲೆ ಹಾಗು ಸಂಸ್ಕೃತ ಸ್ನಾತಕ, ಸ್ನಾತಕೋತ್ತರ

ಕಾಲೇಜನ್ನು ಸೇರಿಕೊಂಡು ಸೇವೆಸಲ್ಲಿಸುತ್ತಿದೆ. ಮಾನ್ಯ ಕುಲಪತಿಗಳಾದ ಪ್ರೊ. ಮಲ್ಲೇಪುರಂ ವೇಂಕಟೇಶ ಇವರು ಕುಲಸಚಿವರಾದ ಪ್ರೊ. ಸಿದ್ದೇಗೌಡರೊಂದಿಗೆ ಸಂಸ್ಕೃತ ಸೇವೆಯಲ್ಲಿ ತಮ್ಮನ್ನು ಅರ್ಪಿಸಿಕೊಂಡು ಸಂಸ್ಕೃತ ವಿಶ್ವವಿದ್ಯಾನಿಲಯದ ಯಶಸ್ಸಿನಲ್ಲಿ ಮಹತ್ತರ ಪಾತ್ರವಹಿಸಿದ್ದಾರೆ.

**ಸುವರ್ಣ ಮಹೋತ್ಸವ:** ವಿದ್ಯಾಪೀಠವು ಕ್ರಿ.ಶ.2006ರಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಿತು. ಅದರ ಅಂಗವಾಗಿ ಸಂಸ್ಥೆಯ ಅಧ್ಯಾಪಕರು ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಆಯ್ದ ದಿನಗಳಂದು ವಿಚಾರಗೋಷ್ಠಿಗಳನ್ನು ನಡೆಸಿದ್ದರು. 24.12.2006ರಿಂದ 26.12.2006ವರೆಗೆ ಮೂರುದಿನಗಳ ಕಾಲ ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಕವಿ ಗೋಷ್ಠಿಗಳನ್ನು ಆಯೋಜಿಸಲಾಗಿತ್ತು. 09.07.2005 ರಂದು ಸುವರ್ಣ ಮಹೋತ್ಸವ ವರ್ಷದ ಆರಂಭದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಧರ್ಮಸಿಂಗ್ ಅವರು ನಡೆಸಿದರು. ವರ್ಷದ ಕೊನೆಯಲ್ಲಿ 20.03.2006ರಂದು ಕರ್ನಾಟಕದ ರಾಜ್ಯದ ಘನತೆವೆತ್ತ ರಾಜ್ಯಪಾಲರಾಗಿದ್ದ ಶ್ರೀ ಟಿ.ಎನ್. ಚತುರ್ವೇದಿಯವರು ಮೂರುದಿನಗಳ ಗೋಷ್ಠಿಗಳನ್ನು ಉದ್ಘಾಟಿಸಿದರು. ಹೀಗೆ ಸುಮಾರು 56 ವರ್ಷಗಳಿಂದ ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಅಧ್ಯಯನ ಕೇಂದ್ರವು ಸಂಸ್ಕೃತಭಾಷೆ–ಇತಿಹಾಸ–ಪುರಾಣ ಹಾಗೂ ಶಾಸ್ತ್ರಗಳ ಪರಿರಕ್ಷಣೆಯಲ್ಲಿ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದೆ.

# ಶ್ರೀ ಜಗದ್ಗುರು ಗುರುಬಸವೇಶ್ವರ ಸಂಸ್ಕೃತ ಪಾಠಶಾಲೆ ನಡೆದುಬಂದ ದಾರಿ

ಮಲೆನಾಡಿನ ಶಿವಮೊಗ್ಗ ತುಂಗಾತೀರದ ಮಹಾಪೀಠ ಶ್ರೀ ಬೆಕ್ಕಿನಕಲ್ಮಠ ಐತಿಹಾಸಿಕ ಪರಂಪರೆಯುಳ್ಳ ಸರ್ವಧರ್ಮಗಳ ಸಮನ್ವಯ ಕೇಂದ್ರವಾಗಿದೆ. ಧರ್ಮ, ಸಾಹಿತ್ಯ, ಸಂಸ್ಕೃತಿ ಶಿಕ್ಷಣ ಕ್ಷೇತ್ರದಲ್ಲಿ ಗಂಭೀರವಾಗಿ ತೊಡಗಿಸಿಕೊಂಡ ಹೆಗ್ಗಳಿಕೆ ಶ್ರೀ ಮಠದ್ದು.

ಶ್ರೀ ಗುರುಬಸವೇಶ್ವರ ವಿದ್ಯಾಪೀಠ (ರಿ) 1981ರಲ್ಲಿ ಆರಂಭವಾದಾಗಿನಿಂದ ಹಿಂದುಳಿದ ಹಾಗೂ ಬಡಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕೆಂಬ ಸದುದ್ದೇಶ ಹಾಗೂ ಎಲ್ಲಾ ವರ್ಗದವರೂ ಸಂಸ್ಕೃತ ಅಧ್ಯಯನಕ್ಕೆ ಅನುಕೂಲವಾಗುವಂತೆ ಶ್ರೀ ಮಠದ ಪೀಠಾಧಿಪತಿಗಳಾದ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಸಂಸ್ಕೃತ ಪಾಠಶಾಲೆಯನ್ನು ಆರಂಭಿಸಿದರು. ಶ್ರೀ ಬೆಕ್ಕಿನಕಲ್ಮಠ, ಶಿವಮೊಗ್ಗ, ಆನಂದಪುರ, ಹಾರನಹಳ್ಳಿ, ನ್ಯಾಮತಿಯಲ್ಲಿ ಶಾಲೆ ಆರಂಭಿಸಲಾಯಿತು.

ಸಾರ್ವಜನಿಕ ಶಿಕ್ಷಣ ಇಲಾಖೆ ಅನುಮತಿಯೊಂದಿಗೆ ಅನುದಾನಸಹಿತ ಪಾಠಶಾಲೆ ಆರಂಭವಾಯಿತು. ಅಂದಿನಿಂದ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಿ ಪ್ರಥಮ ಹಾಗೂ ಕಾವ್ಯ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ಪಡೆಯುತ್ತಾ ಬಂದಿದೆ. ಈ ಭಾಗದಲ್ಲಿ ಸಂಸ್ಕೃತ ಅಭ್ಯಾಸ ಮಾಡುವವರಿಗೆ ಒಂದು ಅಧ್ಯಯನ ಕೇಂದ್ರವಾಗಿ ರೂಪುಗೊಂಡಿದೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಆರಂಭವಾದಾಗಿನಿಂದ ಅದರ ಸಂಯೋಜನೆ ಪಡೆದು ಶಿವಮೊಗ್ಗ ನಗರದಲ್ಲಿ ಈ ಶಾಲೆಯು ಸುಸಜ್ಜಿತ ಕಟ್ಟಡದಲ್ಲಿ ವೇದ ಮತ್ತು ಸಾಹಿತ್ಯ ತರಗತಿಗಳನ್ನು ದಕ್ಷ ಶಿಕ್ಷಕರಿಂದ ನಡೆಸಿಕೊಂಡು ಬರುತ್ತಿದೆ.



**ಶ್ರೀ ಜಗದ್ಗುರು ಗುರುಬಸವೇಶ್ವರ ಸಂಸ್ಕೃತ ಪಾಠಶಾಲೆ, ಬೆಕ್ಕಿನಕಲ್ಮಠ, ಶಿವಮೊಗ್ಗ –ಇಲ್ಲಿ ನಡೆದ ಸರಸ್ವತಿ ಪೂಜಾ ಕಾರ್ಯಕ್ರಮದ ಛಾಯಾಚಿತ್ರ.**

ಕಳೆದ ಎರಡು ವರ್ಷದಿಂದ ಸಂಸ್ಕೃತ ಪರೀಕ್ಷಾ ಕೇಂದ್ರವನ್ನು ವಿಶ್ವವಿದ್ಯಾಲಯವು ಶಾಲೆಗೆ ನೀಡಿದೆ. ಇಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಸಮಾಜದ ವಿವಿಧ ರಂಗಗಳಲ್ಲಿ ಉತ್ತಮ ಹೆಸರು ಪಡೆದಿದ್ದಾರೆ. ಪ್ರೊ. ಕೆ. ರಾಮದಾಸ್, ಸಾಹಿತಿ ವಿಲಿಯಂ, ಖ್ಯಾತ ಸಂಶೋಧಕರಾದ ಪ್ರೊ. ಗೌ.ಮ. ಉಮಾಪತಿ ಶಾಸ್ತ್ರಿಗಳವರು ಶ್ರೀಮಠದ ವಿದ್ಯಾರ್ಥಿಗಳಾಗಿದ್ದರು ಎಂಬುದು ಹೆಮ್ಮೆಯ ವಿಷಯ. ಸಂಸ್ಕೃತ ಸಂಭಾಷಣಾ ಶಿಬಿರ, ಸಾಪ್ತಾಹಿಕ ಕಾರ್ಯಕ್ರಮ, ಸಂಸ್ಕೃತೋತ್ಸವ, ಸರಸ್ವತಿ ಪೂಜಾ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. 2011–12ನೇ ಸಾಲಿನ ವಾರ್ಷಿಕ ಪರೀಕ್ಷಾ ಪ್ರವೇಶ ಪತ್ರ ವಿತರಣೆ ಹಾಗೂ ಸರಸ್ವತಿ ಪೂಜೆಯಲ್ಲಿ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮಹಾಸ್ವಾಮಿಗಳವರು ದಿವ್ಯ ಸಾನ್ನಿಧ್ಯ ವಹಿಸಿದ್ದರು ಹಾಗೂ ಮುಖ್ಯ ಶಿಕ್ಷಕರಾದ ವಿದ್ವಾನ್ ಸಿ. ರೇಣುಕಾರಾಧ್ಯರು, ಅತಿಥಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ವೇದಾಂತ ವಾಚಸ್ಪತಿ ಕಟ್ಟೆ ವಾದಿರಾಜಾಚಾರ್ಯ

**ಸಂದರ್ಶಕರು: ಡಾ. ಹೆಚ್.ಕೆ. ಸುರೇಶ ಆಚಾರ್ಯ**



**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಸ್ತೃತ ಕಾರ್ಯಚಟುವಟಿಕೆಯಲ್ಲಿ ಪ್ರಾಚೀನ ಘನ ವಿದ್ವಾಂಸರನ್ನು, ಸಂಸ್ಕೃತ ಕ್ಷೇತ್ರದಲ್ಲಿ ವಿಶೇಷ ಸೇವೆ ಸಲ್ಲಿಸಿದ ಮಹನೀಯರನ್ನು ಇಂದಿನ ಸಂಸ್ಕೃತ ಅಭಿಮಾನಿ ಬಳಗಕ್ಕೆ ಪರಿಚಯಿಸುವುದು ಅಡಕವಾಗಿದೆ. ಏತನ್ಮೂಲಕ ಇಂದಿನವರಲ್ಲಿ ಸಂಸ್ಕೃತ ಕಲಿಕೆಗೆ, ಪ್ರಸಾರಕ್ಕೆ ಪ್ರೋತ್ಸಾಹಿಸುವದೇ ಗುರಿಯಾಗಿದೆ. ಈ ದೃಷ್ಟಿಯಿಂದ ಸಂಸ್ಕೃತ ವಿಶ್ವವಿದ್ಯಾಲಯದ ತ್ರೈಮಾಸಿಕ ವಾರ್ತಾ ಪತ್ರಿಕೆ ಪ್ರಖ್ಯಾತರಾದ 85 ವರ್ಷದ ಪಂಡಿತ ಶಿರೋಮಣಿ ಕಟ್ಟೆ ವಾದಿರಾಜ ಆಚಾರ್ಯರನ್ನು ಸಂದರ್ಶಿಸಿ ಪರಿಚಯಿಸುತ್ತಿದೆ.**

**ಸಂ: ಆಚಾರ್ಯರೇ! ತಮ್ಮನ್ನು ಸಂಸ್ಕೃತ ಅಧ್ಯಯನಕ್ಕೆ ಪ್ರೇರೇಪಿಸಿದವರು ಯಾರು ಹಾಗೂ ಕಲಿಕೆಯ ಆರಂಭದ ದಿನಗಳ ಬಗೆಗೆ ತಿಳಿಸಿರಿ.**

ವಾ: ಉಡುಪಿಯಲ್ಲಿ ಸಂಸ್ಕೃತದ ಕಲಿಕೆಗೆ ಆಶ್ರಯತಾಣ ಸಂಸ್ಕೃತ ಪಾಠಶಾಲೆ. ಇದು ಅತ್ಯಂತ ಪ್ರಾಚೀನವಾದ ದೇವಸ್ಥಾನ ಅನಂತೇಶ್ವರದ ಸನ್ನಿಧಾನದಲ್ಲಿತ್ತು. ನಮ್ಮ ತಂದೆ ಕಟ್ಟೆ ಶ್ರೀನಿವಾಸಾಚಾರ್ಯರು 1920–30ರ ದಶಕದಲ್ಲಿ ಉದ್ದಾಮ ಪಂಡಿತರಾಗಿದ್ದರು. ಉತ್ತರಾದಿ ಮಠದ ಸತ್ಯಧ್ಯಾನತೀರ್ಥರೆಂಬ ಘನವಿದ್ವಾಂಸರಾದ ಯತಿಗಳ ಅಂತೇವಾಸಿಗಳಾಗಿ ತರ್ಕವೇದಾಂತ ಮೊದಲಾದ ಶಾಸ್ತ್ರಗಳಲ್ಲಿ ತಲಸ್ಪರ್ಶಿ ಪಾಂಡಿತ್ಯವನ್ನು ಪಡೆದರು. ನಮ್ಮ ತಂದೆಯೇ ನನಗೂ ನನ್ನ ತಮ್ಮನಾದ, ಇತ್ತೀಚೆಗೆ ದಿವಂಗತರಾದ ಉನ್ನತ ಶಿಕ್ಷಣ ಸಚಿವರಾಗಿದ್ದ ಡಾ. ವಿ.ಎಸ್. ಆಚಾರ್ಯರವರಿಗೂ ಬಾಲ್ಯದ ಸಂಸ್ಕೃತ–ಸ್ತೋತ್ರ–ವೇದ ಪಾಠಗಳನ್ನು ಹೇಳಿಕೊಟ್ಟರು. ಮುಂದೆ ವೇದಾಂತದ ಉದ್ಗ್ರಂಥಗಳ ಅಧ್ಯಾಪನ ಮಾಡಿದರು.

**ಸಂ: ಉಡುಪಿಯ ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಯಾವ ವಿಭಾಗದಲ್ಲಿ ನಿಮ್ಮ ಅಧ್ಯಯನ ಸಾಗಿತು? ನಿಮ್ಮ ಗುರುಗಳ ಸಂಕ್ಷಿಪ್ತ ಪರಿಚಯ ತಿಳಿಸಿರಿ.**

ವಾ: 1945ರ ಸುಮಾರಿಗೆ ನಮ್ಮ ಸಂಸ್ಕೃತ ಮಹಾಪಾಠಶಾಲೆ ಮದ್ರಾಸ್ ಸರ್ಕಾರದ ಆಡಳಿತಕ್ಕೆ ಒಳಪಟ್ಟಿತ್ತು. 'ಶಿರೋಮಣಿ' ಎಂಬ ಪದವಿಯನ್ನು ಅಧ್ಯಯನದ ಅಂತಿಮ ವರ್ಷದಲ್ಲಿ ನೀಡುತ್ತಿದ್ದರು. ಈಗ ವಿದ್ವಾನ್ ಪದವಿಯ ಮಾದರಿಯಲ್ಲಿ ತರ್ಕ ವಿಭಾಗದಲ್ಲಿ ಅಧ್ಯಯನ ಮುಂದುವರೆಸಿ 'ತರ್ಕ ಶಿರೋಮಣಿ' ಪದವಿ ಪಡೆದೆನು. ನಮ್ಮ ತರ್ಕಶಾಸ್ತ್ರದ ಗುರುಗಳು ತರ್ಕಕೇಸರಿಯೆನಿಸಿದ ನ್ಯಾಯಶಿರೋಮಣಿ ಪಡುಮನ್ನೂರು ನಾರಾಯಣ ಆಚಾರ್ಯರು ಸಂಸ್ಕೃತ ಮಹಾಪಾಠಶಾಲೆಯ ಪ್ರಾಚಾರ್ಯರಾಗಿದ್ದರು. ಧಾರವಾಡದ ಆ ಕಾಲದ ತರ್ಕಕೇಸರಿ ವಿರೂಪಾಕ್ಷ ಶಾಸ್ತ್ರಿಗಳಲ್ಲಿ ಅಧ್ಯಯನ ಮಾಡಿ ಮನ್ನಣೆ ಪಡೆದಂತಹವರು. ಇಂದಿನ ನಾಡಿನ ಪ್ರಖ್ಯಾತ ವಿದ್ವಾಂಸರಾದ ಬನ್ನಂಜೆ ಗೋವಿಂದಾಚಾರ್ಯರ ತಂದೆಯವರು. ಸಣ್ಣ ಕಾವ್ಯ ಪಾಠವನ್ನು ಹೇಳುವ ತೆರದಲ್ಲಿ ಸಾಮಾನ್ಯ ನಿರುಕ್ತಿ–ಅವಚ್ಛೇದಕತ್ವ, ನಿರುಕ್ತಿ–ವ್ಯುತ್ಪತ್ತಿವಾದ ಮೊದಲಾದವುಗಳನ್ನು ವಿಶೇಷವ್ಯಾಖ್ಯಾನ ಸಹಿತವಾಗಿ ಲೀಲಾಜಾಲವಾಗಿ ತಿಳಿಸುತ್ತಿದ್ದರು. ಸಗ್ರಿಹಯಗ್ರೀವಾಚಾರ್ಯರು ಮತ್ತು ಬನ್ನಂಜೆ ಅನಂತ ಕೃಷ್ಣಾಚಾರ್ಯರು ಮೊದಲಾದವರು ತರ್ಕಶಾಸ್ತ್ರದ ಉದ್ದಾಮ ಪಂಡಿತರಾಗಿದ್ದು ಅವರಿಂದ ಬಹಳ ಗ್ರಂಥಗಳನ್ನು ಕಲಿತೆವು. ತರ್ಕ ವ್ಯಾಕರಣ ಸಾಹಿತ್ಯಗಳಲ್ಲಿ ಪ್ರಖ್ಯಾತ ಪಂಡಿತರಾಗಿದ್ದ ಅಲೆವೂರು ಸೀತಾರಾಮ ಆಚಾರ್ಯರು, ಅಡ್ಡೆ ರಾಮಕೃಷ್ಣ ಆಚಾರ್ಯರು, ಶ್ರೀನಿವಾಸ ಭಟ್ಟರು ಇವರನ್ನೆಲ್ಲ ನಾವು ಮರೆಯುವಂತೆಯೇ ಇಲ್ಲ.

**ಸಂ: ವೇದಾಂತ ಶಾಸ್ತ್ರದ ಅಧ್ಯಯನಕ್ಕೆ ನಿಮಗೆ ಗುರುಗಳು, ಮಾರ್ಗದರ್ಶಕರು ಯಾರು?**

ವಾ: 1950ರಲ್ಲಿ ತರ್ಕಶಿರೋಮಣಿ ಪದವಿ ಪಡೆದು ವೇದಾಂತವನ್ನು ತಂದೆಯವರಲ್ಲಿ ಪ್ರಾರಂಭದಿಂದಲೇ

ಪಡೆದುಕೊಂಡೆನು. 1952–54ರಲ್ಲಿ ಕೃಷ್ಣಪರ್ಯಾಯದ ದೀಕ್ಷೆ ಹೊತ್ತ ನಮಗಿಂತ ವಯಸ್ಸಿನಲ್ಲಿ ಕಿರಿಯವರಾಗಿದ್ದರೂ ಅಗಾಧವಾದ ಪಾಂಡಿತ್ಯದ ಬೀಡಾಗಿದ್ದ ಪೇಜಾವರಮಠದ ಶ್ರೀ ಶ್ರೀ ವಿಶ್ವೇಶ್ವರ ತೀರ್ಥರು ಶ್ರೀಮದನುವ್ಯಾಖ್ಯಾನ ನ್ಯಾಯಸುಧಾ ಗ್ರಂಥವನ್ನು ಎರಡು ವರ್ಷಗಳ ಕಾಲ ಪಾಠಮಾಡಿ ವೇದಾಂತದಲ್ಲಿಯೂ ನಮ್ಮನ್ನು ತರಬೇತುಗೊಳಿಸಿದರು. ಈ ಎಲ್ಲಾ ಗುರುಗಳ ಋಣವನ್ನು ನಾವು ಎಂದಿಗೂ ತೀರಿಸಲಾರೆವು.

**ಸಂ: ನಿಮ್ಮ ವೃತ್ತಿ–ಶಾಸ್ತ್ರಗಳ ಪಾಠ ಸಂಸ್ಕೃತ ಪ್ರಸಾರ ಇವುಗಳ ಕುರಿತು ಎರಡು ಮಾತು ತಿಳಿಸಿರಿ.**

ವಾ: ಶಾಸ್ತ್ರಾಧ್ಯಯನವನ್ನು ಚೆನ್ನಾಗಿ ಮಾಡಿದ್ದರೂ ಸುಲಭವಾಗಿ ಮನೆಯ ಹತ್ತಿರದ ಪ್ರೌಢಶಾಲೆಯಲ್ಲಿ ಭಾಷಾಧ್ಯಾಪಕರಾಗುವ ಅವಕಾಶ ದೊರಕಿತು. ಬಿ.ಎಡ್. ಪದವಿ ಪಡೆದು ಕಡಿಯಾಳಿ ಪ್ರದೇಶದ ಕಮಲಾಬಾಯಿ ಪ್ರೌಢಶಾಲೆಯಲ್ಲಿ ಅನೇಕ ವರ್ಷ ಸೇವೆ ಸಲ್ಲಿಸಿ ನಿವೃತ್ತನಾದೆನು. ಈ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತ ಪರಿಷತ್‌ನ ವಿಶೇಷ ಕಾರ್ಯಕರ್ತನಾಗಿ ಸಂಸ್ಕೃತ ಪ್ರಸಾರದಲ್ಲಿ ತೊಡಗಿಸಿಕೊಂಡೆನು. ವಿಶೇಷ ಗ್ರಂಥಗಳ ರಚನೆ ಮಾಡಿದ್ದರೂ ಅನೇಕ ಸಂಸ್ಕೃತ ಕವಿತೆಗಳನ್ನು ರಚಿಸಿದ್ದೆನು. ಕವಿತಾ ವಾಚನ ನನಗೆ ಪ್ರಿಯವಾಗಿತ್ತು.

**ಸಂ: ಸಾಮಾನ್ಯ ಜನರಿಗೆ ಸಂಸ್ಕೃತವನ್ನು ತಲುಪಿಸಬೇಕೆ? ಪಂಡಿತರ ಸ್ವತ್ತಾಗಿದ್ದರೆ ಸಾಕೆ?**

ವಾ: ಸಂಸ್ಕೃತವೂ ಒಂದು ಭಾಷೆ. ಭಾಷೆ ಯಾರ ಸ್ವತ್ತೂ ಅಲ್ಲ. ನಮ್ಮ ಭಾವನೆಗಳ ಅಭಿವ್ಯಕ್ತಿಯ ಮಾಧ್ಯಮವದು. ಇಂದು ಸಂಸ್ಕೃತದ ಜ್ಞಾನ ಭಂಡಾರದ ಬಗ್ಗೆ ಎಲ್ಲರಿಗೂ ಆಸಕ್ತಿ ಇದೆ. ಆದ್ದರಿಂದ ಎಲ್ಲ ವಿದ್ವಾಂಸರೂ ಜನಸಾಮಾನ್ಯರಿಗೂ ಸಂಸ್ಕೃತವನ್ನು ತಲುಪಿಸಿ ಅದರ ಮಹತ್ವ ತಿಳಿಸಬೇಕು. ಸಣ್ಣ ಸಣ್ಣ ಮಕ್ಕಳಲ್ಲಿ ಸಂಸ್ಕೃತ ಕಲಿಕೆಯ ಬಗ್ಗೆ ಆಸಕ್ತಿ ಹುಟ್ಟಿಸಬೇಕು. ಇದಕ್ಕೆ ಜಾತಿಮತಗಳ ಗೋಡೆ ಸಲ್ಲದು. ಇದರಿಂದ ಭಾರತೀಯ ಸಂಸ್ಕೃತಿ ಪಸರಿಸಿ ಭಾರತೀಯತೆ ನಿಜವಾದ ಅರ್ಥದಲ್ಲಿ ಜಾಗೃತವಾಗುತ್ತದೆ. ರಾಮಾಯಣ, ಮಹಾಭಾರತ ಗ್ರಂಥಗಳು ಮನೆ ಮನೆಯನ್ನು ತಲುಪಲಿ, ಎಲ್ಲರೂ ನೀತಿವಂತರಾಗಲಿ. ನಮ್ಮ ಕಾಲದಲ್ಲಿ ಇದಕ್ಕೆ ಸೌಲಭ್ಯ ಇರಲಿಲ್ಲ. ಈಗ ಸೌಕರ್ಯಗಳು ವಿಪುಲವಾಗಿವೆ. ಇದನ್ನು ಬಳಸಿ ಸಂಸ್ಕೃತವನ್ನು ಎಲ್ಲೆಡೆ ಹರಿಸುವುದು ಆವಶ್ಯಕವಾಗಿದೆ.

**ಸಂ: ಮಠಮಾನ್ಯಗಳು, ಸಮಾಜ ತಮ್ಮನ್ನು ಗೌರವಿಸಿರುವುದು ನಿಶ್ಚಿತ. ಅವುಗಳಲ್ಲಿ ಕೆಲವನ್ನು ಉಲ್ಲೇಖಿಸಿರಿ.**

ವಾ: ಪ್ರಶಸ್ತಿಗಳು ಬಹಳ ಬಂದಿವೆ. ಆದರೆ ಇನ್ನೂ ಕೆಲಸ ಮಾಡುವುದು ಬಾಕಿ ಇದೆ. ಪ್ರಸ್ತುತ ಸೋಂದಾಮಠದ ಶ್ರೀ ಶ್ರೀ ವಿಶ್ವವಲ್ಲಭತೀರ್ಥರು ಪ್ರತಿಷ್ಠಿತ ಪರ್ಯಾಯ ಪ್ರಶಸ್ತಿ ನೀಡಿ 'ವೇದಾಂತ ವಾಚಸ್ಪತಿ' ಎಂಬ ಬಿರುದು ನೀಡಿ ನನ್ನನ್ನು ಹರಸಿದ್ದಾರೆ. ಮಂತ್ರಾಲಯ ಮಹಾವಿದ್ಯಾಪೀಠದಿಂದ 'ಪೂರ್ಣಪ್ರಜ್ಞಪ್ರಸಾದ ಪಾತ್ರಂ' 'ವೇದಾಂತ ವಿಚಕ್ಷಣ' ಎಂಬ ಪ್ರಶಸ್ತಿಗಳು ಬಂದಿವೆ. ಶ್ರೀ ಶ್ರೀ ವಿಶ್ವೇಶತೀರ್ಥರು 'ಶ್ರೀಅಧೋಕ್ಷಜ ಪ್ರಶಸ್ತಿ'ಯನ್ನು, ಶ್ರೀ ಪಲಿಮಾರು ಮಠವು 'ವಿದ್ಯಾಮಾನ್ಯ ಪ್ರಶಸ್ತಿ'ಯನ್ನು ಪುತ್ತಿಗೆಮಠವು 'ಕೃಷ್ಣಗೀತಾನುಗ್ರಹ ಪ್ರಶಸ್ತಿ'ಯನ್ನು ನೀಡಿ ಗೌರವಿಸಿವೆ.

**ಸಂ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಸ್ಕೃತ ಪ್ರಸಾರದ ದಿಕ್ಕಿನಲ್ಲಿ ಕೈಗೊಳ್ಳಬೇಕಾದ ಕಾರ್ಯದ ಬಗ್ಗೆ ನಿಮ್ಮ ಸಲಹೆ–ಸೂಚನೆಗಳು....**

ವಾ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸ್ಥಾಪನೆಯೇ ನನಗೆ ಅತೀವ ಹರ್ಷ ತಂದಿದೆ. ಜನಸಾಮಾನ್ಯರಿಗೆ ಸಣ್ಣಮಟ್ಟದಲ್ಲಿಯಾದರೂ ಸಂಸ್ಕೃತವನ್ನು ಮುಟ್ಟಿಸಬೇಕು. ಪ್ರಾಥಮಿಕಸ್ತರದ ವಿದ್ಯಾರ್ಥಿಗಳಿಗೆ ಅತಿಸುಲಭದ ಪರೀಕ್ಷೆಗಳನ್ನು ನಡೆಸಬೇಕು. ಕಡಿಮೆ ದರದಲ್ಲಿ ಪುಸ್ತಕಗಳನ್ನು ಮುದ್ರಿಸಿ ಹಂಚಬೇಕು. ಎಳೆಯ ಮಕ್ಕಳ ಮೂಲಕ ಮನೆಯ ಹಿರಿಯರೂ ಆಸಕ್ತಿ ತಾಳುವಂತೆ ಸರಳ ರೀತಿಯ ಕ್ರಮಗಳನ್ನು ಅಳವಡಿಸಬೇಕು.

**ಸಂ: ಹಿರಿಯರಾದ ತಾವು ತಮ್ಮ ಅನುಭವ ಹಂಚಿಕೊಂಡು ನಮಗೆ ಸಲಹೆ, ಸೂಚನೆ, ಪ್ರೋತ್ಸಾಹ ನೀಡಿ ಹರಸಿದ್ದೀರಿ. ತಮಗೆ ಅನಂತ ಕೃತಜ್ಞತೆಗಳು.**

❑

## ಕುಲಪತಿಗಳಿಗೆ 'ಸಿದ್ಧಗಂಗಾಶ್ರೀಃ' ಪ್ರಶಸ್ತಿ ಪ್ರದಾನ

**27.12.2011**ರಂದು ತುಮಕೂರಿನ ಶ್ರೀ ಸಿದ್ಧಗಂಗಾ ಮಠದಲ್ಲಿ ನಡೆದ **ಸಂಸ್ಕೃತೋತ್ಸವ**ದಲ್ಲಿ ಮಾನ್ಯ ಕುಲಪತಿಗಳಿಗೆ ಮಠದ ವತಿಯಿಂದ **'ಸಿದ್ಧಗಂಗಾಶ್ರೀಃ'** ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಈ ಸಮಾರಂಭದ ದಿವ್ಯಸಾನ್ನಿಧ್ಯವನ್ನು ಡಾ. ಶಿವಕುಮಾರ ಮಹಾಸ್ವಾಮಿಗಳು ವಹಿಸಿದ್ದರು. ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಡಾ. ವಿ.ಎಸ್. ಆಚಾರ್ಯ ಅವರು ಸಮಾರಂಭವನ್ನು ಉದ್ಘಾಟಿಸಿದ್ದರು.

## ‘ಸಂಸ್ಕೃತ ಗ್ರಂಥ ಪುರಸ್ಕಾರ’ ಪ್ರದಾನ ಸಮಾರಂಭ

# ಕರ್ನಾಟಕದಲ್ಲಿ ಮಾತ್ರ ಸಂಸ್ಕೃತಕ್ಕೆ ನೆಲೆ: ರಾಜ್ಯಪಾಲರು



‘ಭಾರತ ದೇಶದ ಸನಾತನವಾದ ಸಂಸ್ಕೃತ ಭಾಷೆ ನೆಲೆನಿಂತಿರುವುದು ರಾಜ್ಯದಲ್ಲಿ ಮಾತ್ರ. ನಮ್ಮ ರಾಜ್ಯದಲ್ಲಿ ಸಂಸ್ಕೃತ ಭಾಷೆಯ ಬಗ್ಗೆ ಕಾಶಿ, ಬನಾರಸ್‌ಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಆದ್ಯತೆ ದೊರಕುತ್ತಿದೆ’ ಎಂದು ಕರ್ನಾಟಕ ಸರ್ಕಾರದ ಘನತೆವೆತ್ತ ರಾಜ್ಯಪಾಲರಾದ ಡಾ. ಹನ್ಸ್‌ರಾಜ್ ಭಾರದ್ವಾಜ್ ಅವರು ಅಭಿಪ್ರಾಯಪಟ್ಟರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ದಿನಾಂಕ 10.03.2012ರಂದು ರಾಜಭವನದಲ್ಲಿ ಆಯೋಜಿಸಿದ್ದ **“ಸಂಸ್ಕೃತ ಗ್ರಂಥಪುರಸ್ಕಾರ”** ಪ್ರದಾನ ಸಮಾರಂಭದಲ್ಲಿ ಮಾತನಾಡುತ್ತಾ, ‘ಕನ್ನಡ ಭಾಷೆಯಲ್ಲಿ ಶೇಕಡಾ 50 ರಷ್ಟು ಸಂಸ್ಕೃತ ಪದಗಳಿವೆ. ಸಂಸ್ಕೃತ ಭಾಷೆಯನ್ನು ಶಾಲೆಗಳು ಮತ್ತು ವಿಶ್ವವಿದ್ಯಾಲಯಗಳ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ. ಆದರೆ ವಿಷಾದದ ಸಂಗತಿ ಎಂದರೆ ದೇಶಾದ್ಯಂತ ಸಂಸ್ಕೃತ ಭಾಷೆಯ ಸಾಹಿತ್ಯ ನಶಿಸುವ ಹಂತ ತಲುಪಿದೆ. ಸಂಸ್ಕೃತ ಭಾಷೆಯನ್ನು ಎಲ್ಲರಿಗೂ ಅರ್ಥವಾಗುವಂತೆ ಸರಳೀಕರಿಸಿದಾಗ ಮಾತ್ರ ವೇದ, ಉಪನಿಷತ್ ಹಾಗೂ ಇತರ ಗ್ರಂಥಗಳನ್ನು ಸಾಮಾನ್ಯ ಜನರೂ ಕೂಡ ಓದಿ ಅರ್ಥಮಾಡಿಕೊಳ್ಳಬಹುದು. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯ ನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ’ ಎಂದು ಸೂಚಿಸಿದರು.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ‘ನನಗೆ ಯಾವುದೇ ಭಾಷೆಯ ಬಗ್ಗೆ ದ್ವೇಷವಿಲ್ಲ, ಆದರೆ ಭಾಷಾವಾರು, ಪ್ರಾಂತೀಯವಾರು, ಕ್ಷೇತ್ರವಾರು ಚಿಂತನೆ ರಾಷ್ಟ್ರಕ್ಕೆ ಅಪಾಯಕಾರಿ’ ಎಂದು ತಿಳಿಸಿದರು. ‘ನಮಗೆ ಸಂಸ್ಕೃತದ ಜ್ಞಾನ ಸಂಪೂರ್ಣವಾಗಿ ದೊರಕಿದ್ದರೆ ನಮ್ಮ ಇತಿಹಾಸ ಪ್ರಜ್ಞೆಯು ಚೆನ್ನಾಗಿರುತ್ತಿತ್ತು. ಋಷಿಮುನಿಗಳ ಕಾಲದ ಸ್ಪಷ್ಟ ಇತಿಹಾಸ ಇಂದು ನಮಗೆ ಲಭ್ಯವಿಲ್ಲದಿರುವುದು ನಾವು ಸಂಸ್ಕೃತದಿಂದ ವಿಮುಖರಾಗಿದ್ದಕ್ಕೆ ಕಾರಣವಿರಬಹುದು’ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ಖ್ಯಾತ ನಿಘಂಟುತಜ್ಞ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಮಾತನಾಡಿ ‘ಕನ್ನಡ ಭಾಷೆಯ ಅಂತರಂಗ ಸತ್ತ್ವ ಹೆಚ್ಚಾಗಬೇಕಾದರೆ ಸಂಸ್ಕೃತ ಶಾಸ್ತ್ರ ಗ್ರಂಥಗಳು ಬಹುಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಕ್ಕೆ ಅನುವಾದಗೊಳ್ಳಬೇಕು. ಸಂಸ್ಕೃತದ ಬೆಳವಣಿಗೆಯಾದಂತೆಲ್ಲಾ ಕನ್ನಡವೂ ಬೆಳೆಯುತ್ತದೆ. ಮೈಸೂರು ದೊರೆಗಳ ಕಾಲದಿಂದಲೂ ಸಂಸ್ಕೃತಕ್ಕೆ ಸಾಕಷ್ಟು ಪ್ರಾಶಸ್ತ್ಯ ದೊರಕಿತ್ತು. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯ ಆಡಳಿತ ಜಾರಿಯಾದಮೇಲೆ ಸಂಸ್ಕೃತಕ್ಕೆ ಸಿಗಬೇಕಾದ ಮಾನ್ಯತೆ ದೊರಕಲಿಲ್ಲ’ ಎಂದು ತಿಳಿಸಿದರು. ‘ಸಂಸ್ಕೃತ ವಿಶ್ವವಿದ್ಯಾಲಯವು ಪ್ರತಿ ಜಿಲ್ಲೆಗಳಲ್ಲಿರುವ ಉತ್ತಮ ಸಂಸ್ಕೃತ ವಿದ್ವಾಂಸರ ಶ್ರೇಷ್ಠ ಗ್ರಂಥಗಳನ್ನು ಪ್ರಕಟಿಸಬೇಕು’ ಎಂದು ಸೂಚಿಸಿದರು.

ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಮಾತನಾಡಿ ‘ಬಹಳ ಹಿಂದೆ ಡಾ. ಡಿ.ವಿ. ಗುಂಡಪ್ಪನವರು ಕನ್ನಡದಲ್ಲಿ ವಿದ್ವತ್ ಪರಂಪರೆ ಕ್ಷೀಣಿಸುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದರು. ಆದರೆ ಆ ಪರಿಸ್ಥಿತಿಗೆ ವ್ಯತಿರಿಕ್ತವಾಗಿ ಸಂಸ್ಕೃತದಲ್ಲಿ ವಿದ್ವತ್‌ಪರಂಪರೆ ಚೆನ್ನಾಗಿ ಬೆಳೆಯುತ್ತಿದೆ. ರಾಜ್ಯಸರ್ಕಾರ, ವಿದ್ವಾಂಸರು, ಸಂಸ್ಕೃತ ಹಿತೈಷಿಗಳು ವಿಶ್ವವಿದ್ಯಾಲಯಕ್ಕೆ ಒಳ್ಳೆಯ ನೆರವನ್ನು ನೀಡುತ್ತಿದ್ದಾರೆ. ಮುಂಬರುವ ವರ್ಷದಿಂದ ಈ ಸಂಸ್ಕೃತ ಗ್ರಂಥ ಪುರಸ್ಕಾರವನ್ನು ಪ್ರೊ. ಎಂ. ಹಿರಿಯಣ್ಣ ಸಂಸ್ಕೃತ ಗ್ರಂಥಪುರಸ್ಕಾರ ಎಂದು ಕರೆಯಲಾಗುವುದು.

ಏಕೆಂದರೆ ಪ್ರೊ. ಎಂ. ಹಿರಿಯಣ್ಣನವರು ಕರ್ನಾಟಕ ಪ್ರಾಂತದ ಮೊಟ್ಟ ಮೊದಲ ಸಂಸ್ಕೃತ ಹಾಗೂ ದರ್ಶನಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು' ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ 'ಕಾವ್ಯೋದ್ಯಾನಂ'ನ ಲೇಖಕರಾದ ಪ್ರೊ. ಎನ್. ರಂಗನಾಥಶರ್ಮ, 'ಕಥಾಲಹರಿ'ಯ ಲೇಖಕರಾದ ಡಾ. ಎಚ್.ವಿ. ನಾಗರಾಜರಾವ್, 'ಆವರಣಂ'ನ ಅನುವಾದಕರಾದ ಡಾ. ಎಚ್.ಆರ್. ವಿಶ್ವಾಸ್, 'ಔದಾರ್ಯ ಗಾದಾಧರಂ'ನ ಲೇಖಕರಾದ ವಿದ್ವಾನ್ ಮಧುಸೂಧನ ಅಡಿಗ, 'ಬಾಲಕಥಾಃ' ಲೇಖಕರಾದ ಡಾ. ರೂಪ, 'ವ್ಯವಹಾರಕೋಶಃ'ದ ಲೇಖಕರಾದ ಶ್ರೀ ಎಸ್. ವೆಂಕಟೇಶ್‌ರವರಿಗೆ ಸಂಸ್ಕೃತ ಗ್ರಂಥ ಪುರಸ್ಕಾರವನ್ನು ಫಲಕ, ಶಾಲು ಹಾಗೂ ಹತ್ತು ಸಾವಿರ ಮೊತ್ತದೊಂದಿಗೆ ನೀಡಲಾಯಿತು.

ಮೊದಲಿಗೆ ವಿದ್ವಾನ್ ವಿಜಯ ಹಾವನೂರ್ ಕನ್ನಡ ನಾಡಗೀತೆ ಮತ್ತು ಸಂಸ್ಕೃತ ಪ್ರಾರ್ಥನೆ ಮಾಡಿದರು. ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ವೈ.ಎಸ್. ಸಿದ್ದೇಗೌಡ ಸ್ವಾಗತ ಕೋರಿದರು. ಸಂಸ್ಕೃತ ವಿಶ್ವವಿದ್ಯಾಲಯದ ಪ್ರಸಾರಾಂಗದ ಉಪನಿರ್ದೇಶಕರಾದ ಪ್ರೊ. ಎಂ.ಕೆ. ಶ್ರೀಧರ್ ಅವರು ವಂದನಾರ್ಪಣೆ ಮಾಡಿದರು. ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಶ್ರೀನಿವಾಸ ವರಖೇಡಿಯವರು ಕಾರ್ಯಕ್ರಮವನ್ನು ನಿಯೋಜಿಸಿದರು.

# ನೂತನ ಕುಲಸಚಿವರಾಗಿ : ಪ್ರೊ. ವೈ.ಎಸ್. ಸಿದ್ದೇಗೌಡ



ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೂತನ ಕುಲಸಚಿವರಾಗಿ ಅಧಿಕಾರ ವಹಿಸಿಕೊಂಡಿರುವ ಪ್ರೊ. ವೈ.ಎಸ್. ಸಿದ್ದೇಗೌಡ ಅವರು ಮೈಸೂರು ವಿಶ್ವವಿದ್ಯಾಲಯದ ಸಮಾಜಕಾರ್ಯ ವಿಭಾಗದ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರಾಗಿ ಮತ್ತು ಅದೇ ವಿಶ್ವವಿದ್ಯಾಲಯದ ವಿಶ್ವವಿದ್ಯಾಲಯ-ಕೈಗಾರಿಕೆ ಅನುನಯ ಸಂಬಂಧ ಕೇಂದ್ರದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಹದಿಮೂರು ವಿದ್ಯಾರ್ಥಿಗಳು ಪಿಎಚ್.ಡಿ. ಮತ್ತು ಇಪ್ಪತ್ತು ವಿದ್ಯಾರ್ಥಿಗಳು ಎಂ.ಫಿಲ್ ಪದವಿಗಳನ್ನು ಪಡೆದಿದ್ದಾರೆ. ನಾಲ್ಕು ಪುಸ್ತಕಗಳ ಲೇಖಕರಾದ ಪ್ರೊ. ವೈ.ಎಸ್. ಸಿದ್ದೇಗೌಡ ಅವರ 89 ಸಂಶೋಧನ ಲೇಖನಗಳು ವಿಶ್ವವಿದ್ಯಾಲಯಗಳ, ರಾಷ್ಟ್ರೀಯ-ಅಂತಾರಾಷ್ಟ್ರೀಯ ಸಂಶೋಧನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಶ್ರೀಯುತರು 316 ವಿಚಾರಗೋಷ್ಠಿಗಳು ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸಿದ್ದಾರೆ. ಬೃಹತ್ ಯೋಜನೆಗಳನ್ನು ಕೈಗೊಂಡು ಪೂರೈಸಿದ್ದಾರೆ.

ಪ್ರೊ. ಸಿದ್ದೇಗೌಡರು ಮೈಸೂರು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾಧಿಕಾರಿಯಾಗಿ, ಶಿಕ್ಷಕ ಸಲಹೆಗಾರರಾಗಿ, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಸಂಸ್ಥೆಯ ನಿರ್ದೇಶಕರಾಗಿ ಮಾಡಿರುವ ಸೇವೆ ಅನನ್ಯ. ಬಹಳ ವಿಶಾಲವಾದ ಆಡಳಿತಾತ್ಮಕ ಅನುಭವ ಹೊಂದಿರುವ ಪ್ರೊ. ಸಿದ್ದೇಗೌಡರು ಯುಜಿಸಿ, ಡಿಎಸ್‌ಟಿ, ನ್ಯಾಕ್ ಮುಂತಾದ ಹಲವು ರಾಷ್ಟ್ರೀಯ ಪರಿಷ್ಕರಣ ಸಮಿತಿಗಳಲ್ಲಿ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಇವರು ಇಂಗ್ಲೆಂಡ್, ನ್ಯೂಜಿಲ್ಯಾಂಡ್, ದಕ್ಷಿಣ ಏಷ್ಯಾ, ಚಿಲಿ, ಆಸ್ಟ್ರೇಲಿಯಾ, ಪ್ಯಾರಿಸ್‌ಗಳಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಆಹ್ವಾನಿತ ಉಪನ್ಯಾಸ ನೀಡಿ, ಉನ್ನತ ಪ್ರಬಂಧಗಳನ್ನು ಮಂಡಿಸಿದ್ದಾರೆ. ಸರ್ಕಾರೇತರ ಸಂಸ್ಥೆಗಳಾದ ದೀಕ್ಷಾ, ಐಫಾನ್, ರೂಪ, ರಿವರ್‌ವ್ಯಾಲಿ ಆರ್ಗನೈಜೇಷನ್, ಎನ್‌ವಿಪಿಎಂ, ಜಿಎಂಎಂಎ, ಎಚ್‌ಆರ್‌ಡಿ ನೆಟ್‌ವರ್ಕ್, ಐಎಸ್‌ಟಿಡಿ ಮುಂತಾದುವುಗಳಿಗೆ ಸಲಹೆಗಾರರಾಗಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರೊ. ವೈ.ಎಸ್. ಸಿದ್ದೇಗೌಡ ಅವರನ್ನು ಹಾರ್ದಿಕವಾಗಿ ಸ್ವಾಗತಿಸುತ್ತದೆ.

## ಡಾ. ಎಂ.ಕೆ. ಶ್ರೀಧರ್

ಬಸವನಗುಡಿ ನ್ಯಾಷನಲ್ ಪದವಿ ಕಾಲೇಜಿನ (ಸ್ವಾಯತ್ತ) ಸಂಸ್ಕೃತ ಉಪಪ್ರಾಧ್ಯಾಪಕರಾದ ಡಾ. ಎಂ.ಕೆ. ಶ್ರೀಧರ್ ಅವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಸಾರಾಂಗದ ಉಪನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

## ಡಾ. ಎಸ್.ಎನ್. ಸಂಪತ್ಕುಮಾರ್

ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಪ್ರಭಾರ ಪ್ರಾಚಾರ್ಯರಾಗಿದ್ದ ಹಾಗೂ ವಿಶಿಷ್ಟಾದ್ವೈತವೇದಾಂತ ಪ್ರಾಧ್ಯಾಪಕರಾದ ಡಾ. ಎಸ್.ಎನ್. ಸಂಪತ್ಕುಮಾರ್ ಅವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾಂಗ ಸಹಾಯಕ ಕುಲಸಚಿವರಾಗಿ ಅಧಿಕ ಪ್ರಭಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

# ಕನ್ನಡ ಸಂಸ್ಕೃತ ಪರಸ್ಪರ ಪೂರಕ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ



'ಕಾಳಿದಾಸ–ಪಂಪ ಸಮಾವೇಶ' ವಿಚಾರಣ ಸಂಕಿರಣವನ್ನು ಉದ್ಘಾಟಿಸಿದ ಮಾನ್ಯ ಕುಲಪತಿಗಳನ್ನು ಸಹ್ಯಾದ್ರಿ ಕಾಲೇಜಿನ ಪದಾಧಿಕಾರಿಗಳು ಸತ್ಕರಿಸುತ್ತಿರುವುದು.

ಕನ್ನಡ ಮತ್ತು ಸಂಸ್ಕೃತ ಭಾಷಾ ಸಾಹಿತ್ಯಗಳು ಒಂದಕ್ಕೊಂದು ವಿರೋಧವಲ್ಲ ಆದರೆ ಪೂರಕವೆಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರು 'ಕಾಳಿದಾಸ–ಪಂಪ ಸಮಾವೇಶ' ವಿಚಾರಣ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುವ ಸಂದರ್ಭದಲ್ಲಿ ತಿಳಿಸಿದರು.

ಶಿವಮೊಗ್ಗದ ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜಿನ ಸಿ.ಎನ್.ಆರ್.ರಾವ್ ಸಭಾಂಗಣದಲ್ಲಿ ದಿನಾಂಕ: 16.02.2012ರಂದು ನಡೆದ ಈ ಸಮಾವೇಶದಲ್ಲಿ ಅವರು 'ಏಕಾಕಾರದಲ್ಲಿ ಚಿಂತನೆ ಕಟ್ಟುವ ಸಂದರ್ಭದಲ್ಲಿ ವೈವಿಧ್ಯತೆಯನ್ನು ನೋಡಬೇಕು. ಈ ಸಂದರ್ಭದಲ್ಲಿ ಹಲವಾರು ಭಾಷೆಗಳ ಸಂಪರ್ಕ ಅಗತ್ಯ. ಸಂಸ್ಕೃತ ಶುದ್ಧ ನಾಟಕಗಳಲ್ಲಿ ಪ್ರಾಕೃತ ಭಾಷೆಯ ಬಳಕೆಯಿದ್ದು ಕಾಳಿದಾಸ ನಾಟಕಗಳಲ್ಲೂ ಸಹ ನೋಡಬಹುದಾಗಿದೆ. ಕನ್ನಡ ಸಂದರ್ಭದಲ್ಲಿ ಮೊದಲಿನಿಂದಲೂ ಕನ್ನಡ ಮತ್ತು ಸಂಸ್ಕೃತ ಹದವಾಗಿ ಬೆಸೆದುಕೊಂಡಿವೆ. ಕನ್ನಡ ನವೋದಯ ಸಂದರ್ಭದಲ್ಲಿ ಸಹ ಹಲವಾರು ಭಾಷಾ ಸಂಬಂಧಗಳನ್ನು ಯೋಚಿಸಲಾಗುತ್ತಿತ್ತು. ಈ ದಿಶೆಯಲ್ಲಿ ಬಿ.ಎಂ. ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್, ಶಂಭುಶರ್ಮಾ, ಸೇಡಿಯಾಪು ಕೃಷ್ಣಭಟ್ಟ, ಬನ್ನಂಜೆ ಗೋವಿಂದಾಚಾರ್ಯ ಮುಂತಾದವರು ಕನ್ನಡ, ಸಂಸ್ಕೃತ, ಪ್ರಾಕೃತ, ಇಂಗ್ಲೀಷ್ ಭಾಷೆಗಳನ್ನು ಯುಕ್ತ ನಡಿಗೆಯಾಗಿ ಭಾವಿಸಿದ್ದರು. ಅದು ಕಾಲಕ್ರಮೇಣ ನಿಂತು ಹೋಗಿದೆ. ಈಗ ಅದರ ಪ್ರಾರಂಭವಾಗಬೇಕಾಗಿದೆ' ಎಂದು ನುಡಿದರು.

'ಪಂಪ ಮತ್ತು ಕಾಳಿದಾಸರು ಬಹಳ ಹಿಂದೆಯೇ ದೇಸಿ ಮತ್ತು ಮಾರ್ಗವನ್ನು ಪ್ರಸ್ತಾಪಿಸಿದರು. ಆದರೆ ಇಂದು ಇಂಗ್ಲಿಷ್ ಭಾಷೆಯ ಜೊತೆಗೆ ಜಾಗತೀಕರಣದ ಅಂಶಗಳು ದಟ್ಟ ಪ್ರಭಾವ ಬೀರುತ್ತಿವೆ. ಇದರಿಂದ ಸಮಾಜದಲ್ಲಿ ಋಣಾತ್ಮಕವಾದ ಪರಿಣಾಮಗಳು ಉಂಟಾಗುತ್ತಿವೆ. ಅವುಗಳಿಂದ ಮುಕ್ತರಾಗಲು ಹೊಂದಾಣಿಕೆ ಅಗತ್ಯ ಅಥವಾ ಇಂತಹ ಸಮಾವೇಶಗಳು ದಾರಿ ಮಾಡಿಕೊಡುತ್ತವೆ. ಬೇರೆ ಬೇರೆ ಯುಕ್ತಗಳು ಒಂದೆಡೆ ಜೊತೆಗೂಡಿ ಹೊಸತನ ರೂಪಿಸಲು ಈ ಸಮಾವೇಶ ಸಹಕಾರಿಯಾಗುತ್ತದೆ' ಎಂಬುದು ನಿಸ್ಸಂದೇಹ ಎಂದು ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರು ಅಭಿಪ್ರಾಯಪಟ್ಟರು.

ಬೆಂಗಳೂರಿನ ಎಸ್.ಎಸ್.ಎಂ.ಆರ್.ವಿ. ಕಾಲೇಜಿನ ಸಂಸ್ಕೃತ ವಿಭಾಗದ ಉಪಪ್ರಾಧ್ಯಾಪಕರಾದ ಡಾ. ಶ್ರೀರಾಮಭಟ್ ಮಾತನಾಡಿ 'ಕಾಳಿದಾಸನು ತನ್ನ ಕಾವ್ಯ–ನಾಟಕಗಳಲ್ಲಿ ಭೂತಕಾಲವನ್ನು ವರ್ತಮಾನಕಾಲದಲ್ಲಿಟ್ಟು, ವರ್ತಮಾನವನ್ನು ಭವಿಷ್ಯದಲ್ಲಿಟ್ಟು ಚಿಂತಿಸಿದ್ದು, ಆ ಸಂವೇದನಾಶೀಲ ಪ್ರಕ್ರಿಯೆಯ ಅಂಶಗಳನ್ನು ಪಂಪನು ಬಳಸಿಕೊಂಡಿದ್ದಾನೆ' ಎಂದು ತಿಳಿಸಿದರು.

'ಇಂದು ಅನೇಕ ಸಾಹಿತಿಗಳು ರಾಜಕೀಯದಲ್ಲಿ ಮೂಗುತೋರಿಸಬೇಕೇ? ಅಥವಾ ರಾಜಕೀಯ ಚಿಂತನೆಗಳಲ್ಲಿ ಮಧ್ಯಪ್ರವೇಶಿಸಬೇಕೇ?' ಎಂದು ಅಂತರಂಗದಲ್ಲಿ ಪ್ರಶ್ನಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾಲವೇ ಉತ್ತರ ನೀಡಲಿದೆ ಎಂದು ನುಡಿದರು.

ವಿಚಾರಸಂಕಿರಣದ ಪ್ರಾರಂಭದಲ್ಲಿ ಪೂಜಾ ಪ್ರಾರ್ಥನೆ ಮಾಡಿದರು. ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಬಿ.ಎಸ್. ಮಹದೇವಯ್ಯರವರು ಅಧ್ಯಕ್ಷತೆ ವಹಿಸಿದ್ದರು. ಸಂಸ್ಕೃತ ಹಾಗೂ ಕನ್ನಡ ವಿಭಾಗಗಳ ಮುಖ್ಯಸ್ಥರಾದ ಡಾ. ಸುಮಿತ್ರ ವಿ. ಭಟ್ ಮತ್ತು ಡಾ. ಬಿ.ವಿ. ಸುವರ್ಣ ಉಪಸ್ಥಿತರಿದ್ದರು. ಡಾ. ಶೋಭಾ ಮರವಂತೆ ಕಾರ್ಯಕ್ರಮವನ್ನು ನಿರೂಪಿಸಿದರು.

# ವಿಶ್ವಭಾರತೀ ಸಂಸ್ಕೃತ ಪಾಠಶಾಲೆ–ಸಂಸ್ಕೃತೋತ್ಸವ

ಆರಾಧ್ಯ ಮಹಾಸಭಾ ಆಶ್ರಯದಲ್ಲಿ ನಡೆಯುತ್ತಿರುವ ವಿಶ್ವಭಾರತೀ ಸಂಸ್ಕೃತ ಪಾಠಶಾಲೆಯಲ್ಲಿ ದಿನಾಂಕ 13.8.2011 ರಂದು ಶ್ರೀಯುತ ಎಂ.ಸಿ.ಪಿ. ಆರಾಧ್ಯರವರ ಅಧ್ಯಕ್ಷತೆಯಲ್ಲಿ ರಕ್ಷಾ ಬಂಧನ, ಸಂಸ್ಕೃತೋತ್ಸವ ಹಾಗೂ ಶ್ರೀಕೃಷ್ಣ ಜಯಂತಿಯನ್ನು ಆಚರಿಸಲಾಯಿತು. ಪ್ರಥಮ ಹಾಗೂ ಕಾವ್ಯ ಪರೀಕ್ಷೆಗಳಲ್ಲಿ ಪಾಠಶಾಲೆಗೆ ಪ್ರಥಮರಾಗಿ ಉತ್ತೀರ್ಣರಾದ ಮೊದಲ ಮೂರು ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು. ನಮ್ಮ ಪಾಠಶಾಲೆಯ ವಿದ್ಯಾರ್ಥಿಗಳು ಅಂತರ ಪಾಠಶಾಲಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದಿರುತ್ತಾರೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಆಯೋಜಿಸಿದ್ದ ವಿಭಾಗಮಟ್ಟದ ಭಗವದ್ಗೀತಾ ಕಂಠಪಾಠ ಸ್ಪರ್ಧೆಯಲ್ಲಿ ವಿನಯ್‌ಕುಮಾರ್ ತೃತೀಯ ಬಹುಮಾನವನ್ನು ಪಡೆದಿರುತ್ತಾನೆ.

ಹಲವಾರು ಪಾಠಶಾಲೆಗಳು ಹಾಗೂ ವಿದ್ಯಾಸಂಸ್ಥೆಗಳು ಆಯೋಜಿಸಿದ್ದ ಸ್ತೋತ್ರಗಳು, ಭಗವದ್ಗೀತೆ, ಕಂಠಪಾಠ, ಪಠ್ಯವಚನ ಸ್ಪರ್ಧೆಗಳಲ್ಲಿ ಭಾಗವಹಿಸಿ ಕು: ಕೆ.ಎಂ. ಸುರಭಿತಾತಾಚಾರ್ ಮತ್ತು ಸುಗಂಧಿತಾತಾಚಾರ್ ಹಲವಾರು ಉನ್ನತ ಬಹುಮಾನಗಳನ್ನು ಪಡೆದು, ವಿದ್ಯಾಲಯಕ್ಕೆ ಪರ್ಯಾಯ ಪಾರಿತೋಷಕ ತಂದುಕೊಟ್ಟಿರುತ್ತಾರೆ. ಹಿರಿಯ ಪ್ರಾಥಮಿಕ ವಿಭಾಗದಲ್ಲಿ ಅತಿಥಿ ಎಚ್.ಕೌಶಿಕ್ ಮತ್ತು ರಕ್ಷಿತಾ ಸತೀಶ್ ಹಲವಾರು ಬಹುಮಾನಗಳನ್ನು ಪಡೆದಿರುತ್ತಾರೆ.




ಹೀಗೆ ಆರಾಧ್ಯ ಮಹಾಸಭಾವತಿಯಿಂದ ವಿಶ್ವಭಾರತೀ ಸಂಸ್ಕೃತ ಪಾಠಶಾಲೆ ಹಾಗೂ ಆರಾಧ್ಯ ವಿದ್ಯಾರ್ಥಿ ನಿಲಯವು ವ್ಯವಸ್ಥಿತವಾಗಿ ನಡೆದುಕೊಂಡು ಬರುತ್ತಿದೆ.



ಹೊಸದಾಗಿ ನೇಮಕಾತಿ ಹೊಂದಿದ ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೆ 'ಸೇತುಬಂಧ' ಪ್ರಶಿಕ್ಷಣ ಕಾರ್ಯಕ್ರಮವು ಮಾಯಸಂದ್ರದ ಶ್ರೀ ಕಾಲಭೈರವೇಶ್ವರ ಕಲ್ಪತರು ಆಶ್ರಮದಲ್ಲಿ ದಿನಾಂಕ: 24.03.2012ರಿಂದ 31.03.2012ರ ವರೆಗೆ ನಡೆಯಿತು. ಸಮಾರೋಪ ಸಮಾರಂಭದ ದಿವ್ಯಸಾನ್ನಿಧ್ಯವನ್ನು ಶ್ರೀ ಶಿವಕುಮಾರನಾಥ ಸ್ವಾಮಿಗಳು ವಹಿಸಿದ್ದರು. ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ವೈ.ಎಸ್. ಸಿದ್ದೇಗೌಡ, ಪ್ರಾಚಾರ್ಯರಾದ ವಿದ್ವಾನ್ ಸಿ. ನಂಜುಂಡಯ್ಯ ಮತ್ತು ಇತರ ಗಣ್ಯರು ಉಪಸ್ಥಿತರಿದ್ದರು.

# ಶ್ರೀ ಗಜಾನನ ಸಂಸ್ಕೃತ ಮಹಾಪಾಠಶಾಲಾ, ಸೂಡಿ – ಗಣರಾಜ್ಯೋತ್ಸವ

ದಿನಾಂಕ 26.1.2012ರಂದು ಈ ಕಾಲೇಜಿನಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು. ಈ ಗಣರಾಜ್ಯೋತ್ಸವದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯರಾದ ಶ್ರೀ ಜಿ.ಆರ್. ಜೋಶಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಎಂ.ಎಸ್. ಬಿದರೂರ ಅವರು ಧ್ವಜಾರೋಹಣ ಮಾಡಿ, ದೇಶ ರಕ್ಷಣೆಯಾಗಬೇಕಾದರೆ ವಿದ್ಯಾಜ್ಞಾನದ ಆವಶ್ಯಕತೆ ಮುಖ್ಯವಾಗಿದೆ ಎಂದು ತಿಳಿಸಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಶ್ರೀ ಭುಜಂಗಶರ್ಮಾ ಇವರು ಸಜ್ಜನರ ಮನಸ್ಸು ಬಹಳ ವಿಶಾಲವಾದದ್ದು ಎಂದು ತಿಳಿಸಿದರು. ಮುಖ್ಯೋಪಾಧ್ಯಾಯರಾದ ಶ್ರೀ ಎಂ.ಬಿ. ಕಾರಡಗಿನ ಜನಚೇತನ ಶಿಕ್ಷಣ, ಸೂಡಿ ಇವರು ಮಾತನಾಡಿ ಪ್ರಜಾತಂತ್ರ ರೂಪಿಸಿದ ಶ್ರೀ ಬಿ.ಆರ್. ಅಂಬೇಡ್ಕರ್ ಇವರ ಸಾಧನೆ ಮೆಚ್ಚುತ್ತಾ ನಾವು ನಮ್ಮ ಪ್ರಜೆಗಳನ್ನು ರಕ್ಷಿಸಬೇಕು ಎಂದು ಸೂಚಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಜಿ.ಆರ್. ಜೋಶಿ ಇವರು ದೇಶ ಸಂರಕ್ಷಣೆ ಮಾಡಿದ ಹಿಂದಿನ ಎಲ್ಲಾ ಮಹಾತ್ಮರನ್ನು ಸ್ಮರಿಸುತ್ತಾ ಅವರಲ್ಲಿರುವ ಒಂದೊಂದು ಗುಣವನ್ನು ಗ್ರಹಿಸಿದರೆ ಉತ್ತಮ ಪ್ರಜೆಗಳಾಗುತ್ತೇವೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳು ಮಹಾತ್ಮರ ವೇಷಧರಿಸಿ ಎಲ್ಲರನ್ನು ಸೋಜಿಗಗೊಳಿಸಿದರು. ಶ್ರೀ ಎಸ್.ಬಿ.ಆರೇರ ವಂದಿಸಿದರು. ಶ್ರೀಮತಿ ಬಿ.ಎಂ. ಮುಲ್ಲಾ ಕಾರ್ಯಕ್ರಮವನ್ನು ನಿರೂಪಿಸಿದರು.

# ಶ್ರೀ ಡಿ.ಜಿ. ಮೇಲ್ಮಾಳಗಿ ಸಂಸ್ಕೃತ ಪಾಠಶಾಲಾ, ಗದಗ

ದಿನಾಂಕ 6.3.2012 ರಂದು ಶ್ರೀ ಡಿ.ಜಿ. ಮೇಲ್ಮಾಳಗಿ ಸಂಸ್ಕೃತ ಪಾಠಶಾಲೆ ಮತ್ತು ಶ್ರೀ ಸದಾಶಿವಾನಂದ ಪ್ರಸಾದ ನಿಲಯಗಳ ಸಂಯುಕ್ತ ಆಶ್ರಯದಲ್ಲಿ ವಾರ್ಷಿಕೋತ್ಸವ ಮತ್ತು ಸರಸ್ವತಿ ಪೂಜಾ ಸಮಾರಂಭವು ನಡೆಯಿತು. ಅಧ್ಯಕ್ಷತೆಯನ್ನು ತೋಂಟದಾರ್ಯ ಸಂಸ್ಕೃತ ಪಾಠಶಾಲೆ ಮುಖ್ಯೋಪಾಧ್ಯಾಯರಾದ ಶ್ರೀ ಎನ್.ಎನ್. ಭಟ್ಟ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ. ಶ್ರೀ ರಾಮಚಂದ್ರ ಎಲ್. ಹಂಸನೂರ ಆಗಮಿಸಿದ್ದರು. ಶ್ರೀಮಲೆ ಡಿ.ಆರ್. ದೇಶಪಾಂಡೆ ಉಪಸ್ಥಿತರಿದ್ದರು.

ವಾರ್ಷಿಕ ಕ್ರೀಡಾ ಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಿ ಮಾತನಾಡುತ್ತಾ ಡಾ. ಆರ್.ಎಲ್. ಹಂಸನೂರವರು ಸಂಸ್ಕೃತ ಪಾಠಶಾಲೆಯಲ್ಲಿ ಕ್ರೀಡಾಕೂಟ ನಡೆಸುವದು ವಿಶೇಷ ಸಂಗತಿಯಾಗಿದ್ದು, ಆಟದ ಜೊತೆಗೆ ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದುವ ಹವ್ಯಾಸವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಯಾರು ಹೆಚ್ಚಿನ ಕಷ್ಟಪಟ್ಟು ಸಾಧನೆ ಮಾಡುತ್ತಾನೋ, ಅವನೇ ಸಿದ್ಧಿ ಪಡೆಯುತ್ತಾನೆ ಎಂದರು. ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಶ್ರೀಮತಿ ಧರಣಿ ದೇಶಪಾಂಡೆಯವರು ಬಹುಮಾನ ವಿತರಿಸಿ, ಸೋತವರು ನಿರಾಶರಾಗದೇ ಮುಂದಿನ ಗೆಲುವಿಗೆ ಅವಿರತ ಪರಿಶ್ರಮ ವಹಿಸಬೇಕೆಂದರು. ಅಧ್ಯಕ್ಷತೆ ವಹಿಸಿದ ಶ್ರೀ ಎನ್.ಎನ್. ಭಟ್ಟರು ಸಂಸ್ಕೃತ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಿದವರಿಗೆ ಬಹುಮಾನ ವಿತರಿಸಿ ಮತ ಮಾನ್ಯಗಳು ಸರ್ವಜನಾಂಗಕ್ಕೂ ಸಂಸ್ಕೃತ ಭಾಷಾ ಬೋಧನೆಗೆ ಅನುವು ಮಾಡಿಕೊಟ್ಟಿವೆ. ಈ ಭಾಷೆಯನ್ನು ಉಳಿಸಿಕೊಂಡು ಬಂದಿವೆ. ಅದನ್ನು ಓದಿ ಉತ್ತಮ ಸಂಸ್ಕಾರ ಹೊಂದಿ ಜ್ಞಾನವಂತರಾಗಿ ಎಂದು ನುಡಿದರು. ಇದೇ ಸಂದರ್ಭದಲ್ಲಿ ಪಿಎಚ್.ಡಿ. ಪದವಿ ಪಡೆದ ಡಾ. ಶ್ರೀರಾಮಚಂದ್ರ ಹಂಸನೂರವರನ್ನೂ ಶಾಲಾವತಿಯಿಂದ ಸನ್ಮಾನಿಸಲಾಯಿತು. ಶ್ರೀ ಸದಾಶಿವಾನಂದ ಪ್ರಸಾದ ನಿಲಯದ ಪ್ರಗತಿಯ ಕುರಿತು ಶ್ರೀ ಬಿ.ಎಸ್. ಬಣಕಾರ್ ಮಾತನಾಡಿದರು. ಹಳೆಯ ವಿದ್ಯಾರ್ಥಿಯಾದ ಶ್ರೀ ಎಫ್.ಹೆಚ್. ಬೇಲೂರ್ ಸ್ವಾಗತಿಸಿದರು. ಶ್ರೀ ಜಿ.ಎಂ. ಪಲ್ಲೇದ ವಂದನಾರ್ಪಣೆ ಮಾಡಿದರು. ಶ್ರೀ ಜಿ.ಎಸ್. ಗಾಂವಕರ ಕಾರ್ಯಕ್ರಮವನ್ನು ನಿರೂಪಿಸಿದರು.

**ಓದುಗರಲ್ಲಿ ಮನವಿ**

ವಾರ್ತಾಪತ್ರಕ್ಕೆ ವರದಿಯನ್ನು ಕಳುಹಿಸಿಕೊಡುವವರು ಭಾವಚಿತ್ರದಲ್ಲಿರುವವರ ಹೆಸರನ್ನು ಅದರ ಹಿಂಭಾಗದಲ್ಲಿ ಸ್ಪಷ್ಟವಾಗಿ ನಮೂದಿಸುವುದರ ಮೂಲಕ ವಾರ್ತಾಪತ್ರಕ್ಕೆ ಸಹಕಾರ ನೀಡಬೇಕಾಗಿ ವಿನಂತಿ.

– ಸಂಪಾದಕ

# ಜ. ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆ ವಾರ್ಷಿಕೋತ್ಸವ

ಸಂಸ್ಕೃತ ಭಾಷೆಗೆ ಜಾತಿ, ಮತ, ಪಂಥಗಳೆಂಬುದಿಲ್ಲ. ಪುರಾತನ ಭಾಷೆಯಾಗಿರುವ ಅದು ನಮ್ಮ ಸಮಾಜದಲ್ಲಿ ಜೀವಂತವಾಗಿದೆ ಎಂದು ಕೊಪ್ಪರ ಅಕಾಡೆಮಿ ಸಂಸ್ಥಾಪಕ ಮತ್ತು ಸಂಸ್ಕೃತ ಭಾರತೀಯ ಜಿಲ್ಲಾ ಘಟಕದ ಅಧ್ಯಕ್ಷ ರವೀಂದ್ರ ಕೊಪ್ಪರ ಅಭಿಪ್ರಾಯಪಟ್ಟರು.

ತಾಯಿ ಪಾರ್ವತಿ ಮಕ್ಕಳ ಬಳಗದ ಜ. ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆಯ 46ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡುತ್ತಿದ್ದರು. ಸಂಸ್ಕೃತಕ್ಕೆ ತನ್ನದೇ ಆದ ಇತಿಹಾಸವಿದೆ ಬೇರೆ ದೇಶದವರು ಸಹ ಈ ಭಾಷೆಯನ್ನು ಕಲಿಯುತ್ತಿದ್ದಾರೆ ಎಂದು ಹೇಳಿ ಜಿ. ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆಯ ಕಾರ್ಯ ಮೆಚ್ಚುವಂತ ಹುದಾಗಿದೆ ಎಂದು ಶ್ಲಾಘಿಸಿದರು. ಸಭೆಯ ಅಧ್ಯಕ್ಷತೆಯನ್ನು ಬಳಗದ ಸದಸ್ಯೆ ಜಯಲಕ್ಷ್ಮೀ ಮಹಾಂತಶೆಟ್ಟರ ವಹಿಸಿದ್ದರು. ಅತಿಥಿಗಳಾಗಿ ಸಂಸ್ಥೆಯ ಪದಾಧಿಕಾರಿಗಳಾದ ಸುವರ್ಣಾಬಾಯಿ ಬಹದ್ದೂರ ದೇಸಾಯಿ, ರೋಹಿಣಿ ಬಾಯಿ ಬಹದ್ದೂರದೇಸಾಯಿ, ಆಡಳಿತಾಧಿಕಾರಿ ಎ. ಬಸವರಾಜಪ್ಪ ಆಗಮಿಸಿದ್ದರು.



ಜ. ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆ ವಾರ್ಷಿಕೋತ್ಸವದಲ್ಲಿ ಉಪಸ್ಥಿತರಿರುವ ಗಣ್ಯರು ಮತ್ತು ಪ್ರಾರ್ಥನೆ ಮಾಡುತ್ತಿರುವ ವಿದ್ಯಾರ್ಥಿನಿಯರು.

ಶಾಲೆಯ ಮುಖ್ಯೋಪಾಧ್ಯಾಯ ಬಿ.ಎಚ್. ಸಂಗೂರಮಠ ಸಂಸ್ಕೃತ ಪಾಠಶಾಲೆ ನಡೆದು ಬಂದ ದಾರಿಯನ್ನು ಸಭೆಗೆ ವಿವರಿಸಿದರು.

ಈ ಸಂದರ್ಭದಲ್ಲಿ ಸೋಮಯ್ಯನವರ ಬಾಳಿಹಳ್ಳಿಮಟ, ಪ್ರತಿಮಾ ಮಹಾಜನಶೆಟ್ಟರ ಇವರನ್ನು ಅಭಿನಂದಿಸಲಾಯಿತು.

ಶಾಲೆಯ ಮುಖ್ಯೋಪಾಧ್ಯಾಯ ಬಿ.ಎಚ್. ಸಂಗೂರಮಠ ಸ್ವಾಗತಿಸಿದರು. ಜಯಶ್ರೀ ಮಳ್ಳಿಗೇರಿ ಕಾರ್ಯಕ್ರಮವನ್ನು ನಿರೂಪಿಸಿದರು. ಕಾರ್ಯಕ್ರಮದ ವಂದನಾರ್ಪಣೆಯನ್ನು ಜಯಪ್ರದಾ ಅಂಗಡಿ ನೆರವೇರಿಸಿದರು.



ದಿನಾಂಕ: 17.01.2012ರಂದು ಶಿವಗಂಗಾ ಕ್ಷೇತ್ರದಲ್ಲಿ ನಡೆದ ರಾಜ್ಯಮಟ್ಟದ ವಿದ್ಯಾರ್ಥಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ದಿವ್ಯಸಾನ್ನಿಧ್ಯ ವಹಿಸಿರುವ ಮೇಲಣ ಗವಿಮಠದ ಶ್ರೀ ಶ್ರೀ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿಯವರು, ಪ್ರಾಚಾರ್ಯರು, ನಿರ್ದೇಶಕರು, ವಿಜೇತರಾದ ವಿದ್ಯಾರ್ಥಿ–ವಿದ್ಯಾರ್ಥಿನಿಯರು, ಕರ್ನಾಟಕ ರಾಜ್ಯ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳು, ವಲಯ ಸಂಯೋಜಕರು.

## ಶ್ರೀಗಣೇಶ ಸಂಸ್ಕೃತ ಜ್ಯೋತಿಷ ಪಾಠಶಾಲಾ, ಮೈಸೂರು

# ವಾರ್ಷಿಕೋತ್ಸವ ಮತ್ತು ಗೀತಾಜಯಂತ್ಯುತ್ಸವ

ದಿನಾಂಕ 22.1.2012ನೇ ಭಾನುವಾರದಂದು ಮೈಸೂರು ನಗರದ, ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ಗಣೇಶ ಸಂಸ್ಕೃತ ಜ್ಯೋತಿಷ ಪಾಠಶಾಲಾ ವತಿಯಿಂದ ವಾರ್ಷಿಕೋತ್ಸವ ಮತ್ತು ಗೀತಾ ಜಯಂತೋತ್ಸವ ಕಾರ್ಯಕ್ರಮವನ್ನು ನೆರವೇರಿಸಲಾಯಿತು.

ಕಾರ್ಯಕ್ರಮವು ಪಾಠಶಾಲಾ ವಿದ್ಯಾರ್ಥಿಗಳ ವೇದಘೋಷದಿಂದ ಆರಂಭಗೊಂಡಿತು. ಪಾಠಶಾಲಾ ವಿದ್ಯಾರ್ಥಿನಿಯರು ಪ್ರಾರ್ಥನೆ ಮಾಡಿದರು. ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ವಿದ್ವಾನ್ ಕೆ. ಪಾರ್ಥನಾರಾಯಣ ರವರು ಸ್ವಾಗತಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಶ್ರೀನಿವಾಸ ವರಖೇಡಿ ಹಾಗೂ ಇತರ ಗಣ್ಯರು ದೀಪಜ್ವಾಲನೆಯನ್ನು ಮಾಡುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಶಾಲೆಯ ಮುಖ್ಯೋಪಾಧ್ಯಾಯರಾದ ವಿದ್ವಾನ್ ಕೆ. ಪಾರ್ಥನಾರಾಯಣರವರು ಶಾಲಾ ವಾರ್ಷಿಕ ವರದಿಯನ್ನು ಓದಿದರು.

ಕರ್ನಾಟಕ ಗೃಹಮಂಡಳಿಯ ಅಧ್ಯಕ್ಷರಾದ ಶ್ರೀ ಜಿ.ಟಿ. ದೇವೇಗೌಡರು ಮುಖ್ಯ ಅತಿಥಿಗಳಾಗಿ ಆಗಮಿಸಿ, ಗೀತಾ ಜಯಂತಿಯ ಔಚಿತ್ಯವನ್ನು ತಿಳಿಸಿ, ಸಂಸ್ಕೃತ ಜನಸಾಮಾನ್ಯರ ಭಾಷೆಯಾಗಬೇಕು ಹಾಗೂ ಈ ಪಾಠಶಾಲೆಗೆ ಸ್ವಂತ ಕಟ್ಟಡವಿಲ್ಲದಿರುವುದರಿಂದ ಸ್ವಂತ ಕಟ್ಟಡವನ್ನು ನಿರ್ಮಿಸಿ ಕೊಡುವ ಭರವಸೆಕೊಟ್ಟರು. ವಿದ್ವಾನ್ ಕೆ. ಗಂಗಣ್ಣನವರು ವಿದ್ಯಾರ್ಥಿಗಳಿಗೆ ಹಿತನುಡಿಯನ್ನು ಹೇಳುತ್ತಾ ಈ ಪಾಠಶಾಲೆ ನಡೆದು ಬಂದ ರೀತಿ ಹಾಗೂ ಈ ಶಾಲೆ ಮಾದರಿ ಶಾಲೆಯಾಗಿದೆ ಎಂದು ಗುಣಗಾನ ಮಾಡಿದರು.

ಶಾಲಾ ವಾರ್ಷಿಕೋತ್ಸವ ಮತ್ತು ಗೀತಾ ಜಯಂತ್ಯುತ್ಸವದ ಅಂಗವಾಗಿ ಕಿರಿಯ ಪ್ರಾಥಮಿಕ ಶಾಲೆ–ಪ್ರಥಮಾ, ಹಿರಿಯ ಪ್ರಾಥಮಿಕ ಶಾಲೆ–ಕಾವ್ಯ, ಪ್ರೌಢಶಾಲೆ, ಸಾಹಿತ್ಯ ವಿದ್ಯಾರ್ಥಿಗಳಿಗೆ ಶ್ರೀ ಮದ್ಭಗವದ್ಗೀತಾ ಲೇಖನ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಪ್ರೊ. ಶ್ರೀನಿವಾಸ ವರಖೇಡಿ ಅವರು, ಶ್ರೀ ಜಿ.ಟಿ. ದೇವೇಗೌಡರು ಮತ್ತು ವಿದ್ವಾನ್ ಶ್ರೀ ಕೆ. ಗಂಗಣ್ಣನವರು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ವಿತರಿಸಿದರು. ಮೈಸೂರು ವಿಭಾಗ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ವಿದ್ವಾನ್ ಎಂ. ಶಿವಮೂರ್ತಿಯವರು ಸಭೆಯಲ್ಲಿ ಉಪಸ್ಥಿತರಿದ್ದರು. ಸಂಸ್ಥೆಯ ಸಂಸ್ಥಾಪಕರಾದ ಚತುಃಶಾಸ್ತ್ರವಿದ್ವಾನ್ ಶ್ರೀ ವಾಸುದೇವ ಸೋಮಯಾಜಿಗಳವರ ಪುತ್ರ ಶ್ರೀ ಲಕ್ಷ್ಮೀಧರ ಸೋಮಯಾಜಿಗಳು ಉಪಸ್ಥಿತರಿದ್ದರು. ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯದ ಪ್ರಾಂಶುಪಾಲರಾದ ವಿದ್ವಾನ್ ಶ್ರೀ ರಾಧಾಕೃಷ್ಣಶಾಸ್ತ್ರಿಯವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರೊ. ಶ್ರೀನಿವಾಸ ವರಖೇಡಿಯವರು ಮಾತುಗಳನ್ನಾಡುತ್ತಾ 'ಈ ಸಮಾರಂಭಕ್ಕೆ ಭಾಗವಹಿಸಿದ ಮಕ್ಕಳು ಮತ್ತು ತಂದೆತಾಯಿಯವರನ್ನು ನೋಡಿ ಸಂತೋಷವಾಯಿತು. ಹಾಗೂ ಶಾಲೆಗೆ ಹೆಚ್ಚು ಮಕ್ಕಳು ಬರುವ ಹಾಗೆ ಆಕರ್ಷಕಬೇಕು' ಎಂದು ತಿಳಿಸಿದರು.

ಪಾಠಶಾಲಾ ವಿದ್ಯಾರ್ಥಿಗಳು ಸಂಸ್ಕೃತ ನಾಟಕ, ನೃತ್ಯಗಳನ್ನು ಪ್ರದರ್ಶಿಸಿದರು. ಪಾಠಶಾಲಾ ಶಿಕ್ಷಕರಾದ ಶ್ರೀ ನರಸಿಂಹ ಭಟ್‌ರವರು ವಂದನಾರ್ಪಣೆ ಮಾಡಿದರು. ಶಾಲಾ ಸಹಶಿಕ್ಷಕರಾದ ವೆಂಕಟರಮಣ ಹೆಗಡೆಯವರು ಕಾರ್ಯಕ್ರಮವನ್ನು ನಿರೂಪಿಸಿದರು. ಐಕ್ಯಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

**संसदि तदेव भूषणमुपकारकमवसरे धनं मुख्यम् ।**
**सूक्तं दधति सुवर्णं कल्याणमनर्घ्यमिह धन्याः ॥**

**ಸಭೆಯಲ್ಲಿ ಹೇಳಲು ಸುಭಾಷಿತ ಅಲಂಕಾರದಂತೆ ಮೆಚ್ಚಿಗೆಯನ್ನು ಪಡೆಯುತ್ತದೆ. ಸಮಯದಲ್ಲಿ ಇದು ಹಣದಂತೆ ಉಪಕಾರ ಮಾಡುತ್ತದೆ. ಮಂಗಳಕರವಾದ, ಚಿನ್ನದಂತೆ ಬೆಲೆಬಾಳುವ ಸುಭಾಷಿತವನ್ನು ತಿಳಿದವರೇ ಧನ್ಯರು.**

# ಅಧ್ಯಾತ್ಮ ಸಂಚಲನ – ಗೀತಾ ಅಭಿಯಾನಯಜ್ಞ

